ಆಗಸ್ಟ್ ೨೦೨೫

# ಆರ್ಬಿಟ್,ಹುಮನಾಬಾದ

ಸಮಾಜ ಸೇವಾ ಸಂಸ್ಥೆ, ಎನ್.ಎಚ್. ೬೫ ರೈಲ್ವೇ
ನಿಲ್ದಾಣದ ಹತ್ತಿರ ಹುಮ್ನಾಬಾದ ತಾಲೂಕು,
ಬೀದರ್ ಜಿಲ್ಲೆ, ಕರ್ನಾಟಕ, 585330

# ಸೇವಾ ಸಂಗಮ ಸಂಸ್ಥೆ, ಕಲಬುರಗಿ

ಸಮಾಜ ಸೇವಾ ಸಂಸ್ಥೆ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ
ಕೇಂದ್ರೀಯ ವಿದ್ಯಾಲಯ ಹತ್ತಿರ, ಕೋಟ್ನೂರ (ಡಿ) ಜೇವರ್ಗಿ ರಸ್ತೆ ಕಲಬುರಗಿ

# ಸೇವಾವಾಣಿ

## ಸಮಾಜದ ಹಿತಕ್ಕೆ ಸಮರ್ಪಿತ ಸೇವೆ





ಡಾ॥ ರಾಬರ್ಟ್ ಮೈಕಲ್ ಮಿರಂದ
ಧರ್ಮಾಧ್ಯಕ್ಷರು, ಹಾಗೂ ಅಧ್ಯಕ್ಷರು
ಆರ್ಬಿಟ್ ಮತ್ತು ಸೇವಾ ಸಂಗಮ ಸಂಸ್ಥೆ



ವಂ. ಫಾ॥ ವಿಕ್ಟರ್ ವಾಸ್
ನಿರ್ದೇಶಕರು, ಆರ್ಬಿಟ್ ಮತ್ತು
ಸೇವಾ ಸಂಗಮ ಸಂಸ್ಥೆ

### "ಆಂತರಿಕ ಲಿಂಗ ಸಮಾನತೆ ತಂಡದ ಸದಸ್ಯರಿಗೆ ಲಿಂಗ ಸಮಾನತೆ ಮತ್ತು ನ್ಯಾಯದ ಕುರಿತು ತರಬೇತಿ"

ಜುಲೈ 8, 9 2025 ರಂದು ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ನಲ್ಲಿ ಕ್ರಾಸ್ ಸಂಸ್ಥೆಯ ನೇತೃತ್ವದ ಮೂರು ಸಹ ಭಾಗಿ ಸಂಸ್ಥೆಯ ಆಂತರಿಕ ಲಿಂಗ ಸಮಾನತೆ ತಂಡದ ಸದಸ್ಯರಿಗೆ ಲಿಂಗ ಸಮಾನತೆ ಮತ್ತು ನ್ಯಾಯದ ಕುರಿತು ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿ ಕಾರ್ಯಗಾರದಲ್ಲಿ ಅತಿ ವಂದನೀಯ ಫಾದರ್ ವಿಕ್ಟರ್ ವಾಸ್ ನಿರ್ದೇಶಕರು ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಇವರ ಪ್ರಾಸ್ತಾವಿಕ ನುಡಿಯಲ್ಲಿ ಮಹಿಳೆಯರು ಮುಂದೆ ಬರಬೇಕಾದರೆ ನ್ಯಾಯದ ಕುರಿತು ಅರಿತಿರಬೇಕು ಸಂಘಟನೆ ಹೋರಾಟ ಇವುಗಳಲ್ಲಿ ತಮ್ಮನ್ನೇ ತಾವು ತೊಡಗಿಸಿಕೊಳ್ಳಬೇಕು ಎಂದು ಹುರಿದುಂಬಿಸಿದರು. ಸಿಸ್ಟರ್ ನ್ಯಾನ್ಸಿ ಲೋಬೋ ಮಹಿಳಾ ಸಬಲೀಕರಣ ಯೋಜನೆಯ ರಾಜ್ಯ ಸಲಹೆಗಾರರು ಬೆಂಗಳೂರು ಇವರು ಲಿಂಗ ಮತ್ತು ಲಿಂಗತ್ವಕ್ಕಿರುವ ವ್ಯತ್ಯಾಸದ ಕುರಿತು ಶಿಬಿರಾರ್ಥಿಗಳಿಗೆ ಮನವರಿಕೆ ಮಾಡಿಸಿದರು. ನಂತರ ಅತಿ ಒಂದನೇ ಫಾದರ್ ರಿಚರ್ಡ್ ಪಾಯಸ ನಿರ್ದೇಶಕರು ಕ್ರಾಸ್ ಸಂಸ್ಥೆ ಬೆಂಗಳೂರು ಇವರು ಲಿಂಗ ಸಮಾನತೆ ಎನ್ನುವುದು ಹಲವಾರು ಕ್ಷೇತ್ರಗಳಲ್ಲಿ ತರಬೇಕಾಗಿದೆ ಆ ಕ್ಷೇತ್ರಗಳೆಂದರೆ ಸಾಮಾಜಿಕ ಕ್ಷೇತ್ರ, ಆರ್ಥಿಕ ಕ್ಷೇತ್ರ, ರಾಜಕೀಯ ಕ್ಷೇತ್ರ ಮತ್ತು ಸಾಂಸ್ಕೃತಿಕ ಕ್ಷೇತ್ರ ಎಲ್ಲಾ ಕ್ಷೇತ್ರಗಳಲ್ಲಿ ಸಮಾನತೆ ತರಬೇಕಾದರೆ ಅದರ ಮೂಲ ತಂತ್ರ ಶಿಕ್ಷಣ ಮತ್ತು ಅರಿವು ಎಂಬುದನ್ನು ಒತ್ತಿ ಹೇಳಿದರು. ಎರಡನೇ ದಿನ ತರಬೇತಿ ಕಾರ್ಯಗಾರದಲ್ಲಿ ಸಿಸ್ಟರ್ ಕ್ರಿಸ್ಟಿನ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ವ್ಯವಸ್ಥಾಪಕರು ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ ತರಬೇತಿಯ ಪ್ರಾರಂಭದಲ್ಲಿ ಮಾತನಾಡುತ್ತ ಮಕ್ಕಳ ಹಕ್ಕುಗಳು, ಜೀವಿಸುವ ಹಕ್ಕು, ಬದುಕುವ ಹಕ್ಕು, ಸ್ವಾತಂತ್ರ್ಯದ ಹಕ್ಕು, ಸಮಾನತೆಯ ಹಕ್ಕು ಇವುಗಳ ಕುರಿತು ಮಾತನಾಡಿದರು. ಉಚಿತ ಕಾನೂನು ನೆರವಿನ ಕುರಿತು ಮಹಿಳೆಯರಿಗೆ ಸವಿಸ್ತಾರವಾಗಿ ಮಾಹಿತಿ ನೀಡಿದರು. ಹಲವಾರು ಚಟುವಟಿಕೆಗಳ ಮೂಲಕ ನಾಟಕ ರೂಪದಲ್ಲಿ ಪ್ರದರ್ಶನ ಮಾಡಿ ವಿಷಯವನ್ನು ಮನದಟ್ಟಾಗುವ ಹಾಗೆ ತರಬೇತಿಯನ್ನು ಯಶಸ್ವಿಗೊಳಿಸಿದರು. ಈ ತರಬೇತಿಯಲ್ಲಿ ಮೂರು ಸಂಸ್ಥೆಯಿಂದ 41 ಶಿಬಿರಾರ್ಥಿಗಳು ಭಾಗವಹಿಸಿ ಉಚಿತ ಕಾನೂನು ಸೇವೆ ಮತ್ತು ಲಿಂಗ ಸಮಾನತೆ ಮತ್ತು ನ್ಯಾಯದ ಕುರಿತು ತರಬೇತಿಯನ್ನು ಪಡೆದುಕೊಂಡರು.



ಮಾನವೀಯತೆಯ ಸೇವೆ,
ಉತ್ತಮ ನಾಳೆಯ ನಿರ್ಮಾಣ.

# "ನವಜೀವನ (ಎ.ಪಿ.ಏಫ್) ಕಾರ್ಯಕ್ರಮ"

## "ಸಂತಲಾರೆನ್ಸ್ ದೇವಾಲಯದಲ್ಲಿ ವನಮಹೋತ್ಸವ ಕಾರ್ಯಕ್ರಮ"



ಚಿಟಗುಪ್ಪ ತಾಲೂಕಿನ ಗಾಂಧಿನಗರ ಗ್ರಾಮದಲ್ಲಿ 13 ಜುಲೈ 2025ರಂದು ವನಮಹೋತ್ಸವ ಕಾರ್ಯಕ್ರಮ ನಡೆಸಲಾಯಿತು. ಸಭೆಯಲ್ಲಿ ಸಂತಲಾರೆನ್ಸ್ ದೇವಾಲಯ ಗಾಂಧಿನಗರ, ದೇವಾಲಯದ ನಿರ್ದೇಶಕರಾದ ಫಾದರ್ ಜಾರ್ಜ್ ರವರು ಎಲ್ಲರಿಗೂ ವನಮೋತ್ಸವ ಮಾಡುವ ಉದ್ದೇಶ ಗಿಡ ಮರಗಳನ್ನು ಬೆಳೆಸಿ ಹಸಿರಾದ ಪರಿಸರವನ್ನು ಕಾಪಾಡಿಕೊಳ್ಳಬೇಕು. ಕಾಲ ಕಾಲಕ್ಕೆ ಮಳೆ ಬೆಳೆಗಳು ಬೆಳೆಯುತ್ತವೆ "ಹಸಿರಿದ್ದರೆ ಉಸಿರು ಉಸಿರಿದ್ದರೆ ಜೀವನ" ನಾವು ಪರಿಸರವನ್ನು ಕಾಪಾಡಿಕೊಂಡರೆ ಪರಿಸರವು ನಮ್ಮನ್ನು ಕಾಪಾಡುತ್ತದೆ. ಆದ್ದರಿಂದ ಮರ ಗಿಡಗಳು ಕಡಿಯುವುದರಿಂದ ಮನುಷ್ಯರಿಗೂ ಪ್ರಾಣಿ ಪಕ್ಷಿಗಳಿಗೂ ಬಹಳ ತೊಂದರೆಯಾಗುತ್ತಿದೆ. ಆದ್ದರಿಂದ ಪ್ರತಿಯೊಬ್ಬರೂ ಒಂದೊಂದು ಗಿಡವನ್ನು ನೆಟ್ಟು ವನವನ್ನು ಬೆಳೆಸಿ ನಮ್ಮ ಪರಿಸರವನ್ನು ಹಸಿರಾಗಿ ಇಡಲು ಪ್ರಯತ್ನಿಸೋಣ ಎಂದು ಮನವರಿಕೆ ಮಾಡಿದರು. "ಕಾಡು ಬೆಳೆಸಿರಣ್ಣ ನೀವು ನಾಡು ಉಳಿಸಿರಣ್ಣ" "ಕಾಲುವೆ ತೊರೆಗಳು ತುಂಬಿ ಹರಿಯಲು ಮರ ಗಿಡ ಬೇಕಣ್ಣ" ಎನ್ನುವ ಅರಿವಿನ ಹಾಡಿನೊಂದಿಗೆ ಜನರಲ್ಲಿ ಜಾಗೃತಿಯನ್ನು ಮೂಡಿಸಲಾಯಿತು.



## "ಹಕ್ಕೋತಾಯ ಮತ್ತು ಜಾಲ ಬಂದದ ಕುರಿತು ತರಬೇತಿ"




16 ಜುಲೈ 2025ರಂದು ಚಿಟಗುಪ್ಪಾ ತಾಲೂಕಿನ ಕೋಡಂಬಲ್ ಗ್ರಾಮದಲ್ಲಿ ಗುಲಾಬಿ ಮಹಾಸಂಗದ ಸದಸ್ಯರಿಗೆ ಶ್ರೀಮತಿ ರಿಟಾ ಅವರು "ಹಕ್ಕೋತಾಯ ಮತ್ತು ಜಾಲಬಂದದ" ಕುರಿತು ತರಬೇತಿಯನ್ನು ಹಮ್ಮಿಕೊಂಡಿದ್ದರು. ಮಹಾಸಂಗದ ಸದಸ್ಯರು ನಾಯಕತ್ವದ ಗುಣಗಳನ್ನು ಬೆಳೆಸಿಕೊಂಡು ಊರಿನ ಸಮಸ್ಯೆ, ಗಲ್ಲಿಯ ಸಮಸ್ಯೆಗಳು ಇದ್ದಾಗ ವಿವಿಧ ಇಲಾಖೆಗಳೊಂದಿಗೆ ಜಾಲಬಂದ ಬೆಳೆಸಿಕೊಂಡು ಸಮಸ್ಯೆ ಪರಿಹರಿಸಿಕೊಳ್ಳುವಲ್ಲಿ ಮುಂದಾಗಬೇಕೆಂದು ತಿಳಿಸಿದರು. ಕೌಟುಂಬಿಕ ದೌರ್ಜನ್ಯ ಅಂದರೆ ಕುಟುಂಬದಲ್ಲಿ ಸಣ್ಣಪುಟ್ಟ ಜಗಳಗಳಾದಾಗ ಮಹಾಸಂಗದ ಪದಾಧಿಕಾರಿಗಳು ಕುಟುಂಬ ಭೇಟಿ ಮಾಡುವುದರೊಂದಿಗೆ ಸಾಂತ್ವನ ನೀಡುವುದು ನಿಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಮನ ಮುಟ್ಟುವಂತೆ ತಿಳಿಸಲಾಯಿತು. ಧೈರ್ಯ ನಾಯಕತ್ವವನ್ನು ಬೆಳೆಸಿಕೊಂಡು ಸಮಸ್ಯೆಗಳು ಎದುರಾದಾಗ ಮುನ್ನುಗ್ಗಿ ಪರಿಹರಿಸಿಕೊಳ್ಳುವಲ್ಲಿ ಮುಂದಾಗಿರಿ ಎಂದು ಅವರನ್ನು ಹುರಿದುಂಬಿಸಿದರು. ಈ ತರಬೇತಿಯಲ್ಲಿ ಮಹಾಸಂಗದ ಪದಾಧಿಕಾರಿಗಳು ಭಾಗವಹಿಸಿ ಹಕ್ಕೋತಾಯ ಮತ್ತು ಜಾಲಬಂದದ ಕುರಿತು ತಿಳಿದುಕೊಂಡರು.

## "ಜಾಗತಿಕ ತಾಪಾಮಾನ ಕುರಿತು ತರಬೇತಿ"




01 ಜುಲೈ 2025ರಂದು ಭಾಲ್ಕಿ ತಾಲೂಕಿನ ಜೋಳದಪ್ಕಾ ಗ್ರಾಮದಲ್ಲಿರುವ ಕಾವೇರಿ ಮತ್ತು ಭಾಗ್ಯಶ್ರೀ ಸ್ವ ಸಹಾಯ ಸಂಘದ ಮಹಿಳೆಯರಿಗೆ ಜಾಗತಿಕ ತಾಪಾಮಾನ ಕುರಿತು ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ಈ ತರಬೇತಿಯು ಪ್ರಾರ್ಥನ ಗೀತೆಯೊಂದಿಗೆ ಪ್ರಾರಂಭಿಸಲಾಯಿತು. ಶ್ರೀಮತಿ ಪ್ರೇಮಲತಾ ಸ್ವಾಗತಿಸಿದರು. ಜಾಗತೀಕರಣ ತಾಪಮಾನ ಎಂದರೇನು ಎಂಬುದರ ಬಗ್ಗೆ ಸಂಘದ ಸಭೆಯಲ್ಲಿ ಶ್ರೀಮತಿ ಸುನಿತಾ ಸ್ಪಷ್ಟವಾಗಿ ತಿಳಿಸಲಾಯಿತು. ಏನೆಂದರೆ ಇದ್ದಕ್ಕಿದ್ದಂತೆ ಬಿಸಿಲು ಹೆಚ್ಚಾಗುವುದು ಮತ್ತು ಅಕಾಲಿಕ ಮಳೆ ಆಗುವುದು ವಾತಾವರಣದಲ್ಲಿ ಹೆಚ್ಚು ಕಡಿಮೆಯಾಗುವುದು ಮತ್ತು ಭೂಕಂಪ ಚಂಡಮಾರುತ ಇದರಿಂದ ಆಗುವ ಜನರಿಗೆ ತುಂಬಾ ಹಾನಿಕಾರ ಇದಕ್ಕೆ ಕಾರಣ ಏನೆಂದರೆ ಜನಸಂಖ್ಯೆ ಹೆಚ್ಚಳ ಮತ್ತು ಪರಿಸರ ಮಾಲಿನ್ಯ ಮತ್ತು ಕೈಗಾರಿಕರಣ ಹಾಗೂ ನಗರೀಕರಣ. ಅರಣ್ಯ ನಾಶ ಇತ್ಯಾದಿಗಳನ್ನ ನಾವು ಕಾಣುತ್ತೇವೆ. ಪ್ರತಿಯೊಬ್ಬರು ಪರಿಸರದ ಕುರಿತು ಜವಾಬ್ದಾರಿಯನ್ನು ತೆಗೆದುಕೊಂಡು ಈ ಅನಾಹುತಗಳನ್ನು ತಡೆಗಟ್ಟಬಹುದು. ಮೊಟ್ಟಮೊದಲನೆಯದಾಗಿ ಗಿಡಮರಗಳನ್ನು ಬೆಳೆಸಬೇಕು, ಪರಿಸರವನ್ನ ಕಾಪಾಡಿಕೊಳ್ಳಬೇಕು ಜೊತೆಗೆ ಕೈಗಾರಿಕರಣ ಕಡಿಮೆ ಮಾಡಬೇಕು, ಪ್ಲಾಸ್ಟಿಕ್ ಬಳಕೆ ಮಾಡಬಾರದು, ಅರಣ್ಯ ನಾಶ ಮಾಡಬಾರದು, ಹೆಚ್ಚಾಗಿ ಸ್ಥಳೀಯ ವಸ್ತುಗಳನ್ನ ಉಪಯೋಗಿಸಬಹುದು. ಇದರಿಂದಾಗಿ ನಾವು ಜಾಗತೀಕರಣ ತಾಪಮಾನದಿಂದ ದೂರ ಇರಬಹುದು ಎಂದು ತಿಳಿಸಿದರು. ಈ ತರಬೇತಿಯಲ್ಲಿ ಸುಮಾರು 14 ಸದಸ್ಯರು ಭಾಗವಹಿಸಿದರು. ಐದು ಸದಸ್ಯರು ನಾವು ಈ ತೀರ್ಮಾನಗಳನ್ನ ತೆಗೆದುಕೊಳ್ಳುತ್ತೇವೆ ಎಂದು ನಿರ್ಧಾರ ಮಾಡಿದರು. ಅಂದಿನ ಸಭೆಯು ಸರಿಯಾಗಿ 12:45ಕ್ಕೆ ಶ್ರೀಮತಿ ಶಶಿಕಲಾ ಅವರು ಧನ್ಯವಾದಗಳೊಂದಿಗೆ ಅಂದಿನ ಸಭೆಯು ಮುಕ್ತಾಯ ಮಾಡಲಾಯಿತು.

## “ಪರಿಸರ ಸಂರಕ್ಷಣೆ ನಮ್ಮ ಹಕ್ಕು, ಪ್ಲಾಸ್ಟಿಕ್ ಬಳಕೆ ಕಡಿಮೆ”




17 ಜುಲೈ 2025ರಂದು ಪ್ರೇಮ ಜ್ಯೋತಿ ಮಹಾಸಂಗದ ಮಹಿಳೆಯರಿಗೆ ಮಹಿಳಾ ಸಬಲೀಕರಣ ಯೋಜನೆಯ ಸಂಯೋಜಕಿಯಾದ ಶ್ರೀಮತಿ ನಿರ್ಮಲ ರವರು ಜಾಗತೀಕರಣ ತಾಪಮಾನ ಕುರಿತು ತರಬೇತಿಯನ್ನು ನೀಡಿದರು. ಜಾಗತಿಕ ತಾಪಮಾನ ಎಂದರೆ? ಹವಾಮಾನದಲ್ಲಿ ಆಗುವಂಥ ಬದಲಾವಣೆಯ ಕುರಿತು ತಿಳಿಸುತ್ತಾ, ಸದ್ಯದ ಪರಿಸ್ಥಿತಿಯಲ್ಲಿ ಅಕಾಲಿಕವಾಗಿ ಮಳೆ ಜೊತೆಗೆ ಅತಿ ಹೆಚ್ಚು ಬಿಸಿಲು ಮತ್ತು ಚಂಡಮಾರುತ ಇತ್ಯಾದಿಗಳನ್ನ ಕಾಣುತ್ತೇವೆ. ಇದಕ್ಕೆ ಕಾರಣ ಜನಸಂಖ್ಯೆ ಹೆಚ್ಚಳ, ಪರಿಸರ ಮಾಲಿನ್ಯ, ಕೈಗಾರಿಕರಣ, ನಗರೀಕರಣ ಅರಣ್ಯನಾಶ ಇತ್ಯಾದಿ ಕಾಣುತ್ತೇವೆ. ಇದರಿಂದ ಮನುಕುಲಕ್ಕೆ ಅತಿ ಹೆಚ್ಚಿನ ತೊಂದರೆಗಳಾಗುವುದು ನಾವು ಕಾಣಬಹುದು. ಇದರಿಂದ ನಾವು ತಪ್ಪಿಸಿಕೊಳ್ಳಬೇಕಾದರೆ ಮೊದಲು ಕೈಗಾರಿಕರಣ ಕಡಿಮೆ ಮಾಡಬೇಕು ಮತ್ತು ನೈಸರ್ಗಿಕವಾಗಿ ಸಿಗುವಂತ ವಸ್ತುಗಳನ್ನ ಬಳಸಬೇಕು. ಅರಣ್ಯನಾಶ ಮಾಡಬಾರದು. ಪರಿಸರ ಸಂರಕ್ಷಣೆ ಬಗ್ಗೆ ಅರಿವು ಮೂಡಿಸಿ ಹೆಚ್ಚು ಗಿಡಮರಗಳನ್ನು ಬೆಳೆಸಬೇಕು. ಅದರಿಂದ ಸರಿಯಾದ ಸಮಯಕ್ಕೆ ಮಳೆ ಆಗುತ್ತೆ, ಶುದ್ಧವಾದ ಗಾಳಿ, ನೀರು ಸಿಗುತ್ತದೆ. ಪರಿಸರ ಸಂರಕ್ಷಣೆ ನಮ್ಮ ಹಕ್ಕು, ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಬೇಕು ಎಂದು ತಿಳಿಸಿದರು.

## “ನಮ್ಮ ನಡೆ ಗಿಡ ನೆಡುವ ಕಡೆ” ವನಮೋತ್ಸವ ಕಾರ್ಯಕ್ರಮ”



27 ಜುಲೈ 2025ರಂದು ಹುಲುಸೂರ್ ತಾಲೂಕಿನ ಮುಚಳಂಬ ಗ್ರಾಮದ ದಯಾಸಾಗರ ಸಂಘದ ಸದಸ್ಯರೊಂದಿಗೆ ವನಮೋತ್ಸವ ಕಾರ್ಯಕ್ರಮ ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಶ್ರೀಮತಿ ಚಂದ್ರಕಲಾ ರವರು ಪರಿಸರ ಕುರಿತು ಜನರಿಗೆ ಮಾಹಿತಿ ನೀಡಿದರು. ಇಂದಿನ ದಿನಗಳಲ್ಲಿ ಶುದ್ಧ ಗಾಳಿ ಹಾಗೂ ಶುದ್ಧ ಪರಿಸರದ ಅವಶ್ಯಕತೆ ಇದ್ದು. ಮನುಷ್ಯರಿಗೆ ಶುದ್ಧ ಗಾಳಿ ಶುದ್ಧ ನೀರಿನ ಅವಶ್ಯಕತೆ ಇದ್ದು ಅವುಗಳನ್ನು ಜನರಿಗೆ ಪೂರೈಸಬೇಕಾದರೆ ದುಬಾರಿ ಹಣ ಕೊಟ್ಟು ಖರೀದಿಸುವ ದಿನಗಳು ಬಂದಿವೆ. ಆ ದಿನಗಳು ನಮ್ಮ ದೇಶದಲ್ಲಿ ಬರಬಾರದೆಂದು ಪ್ರತಿಯೊಂದು ಮನೆಗೆ ಪ್ರತಿಯೊಬ್ಬರೂ ಗಿಡಗಳನ್ನು ನೆಡವಿ ಶುದ್ಧ ಗಾಳಿ ಹಾಗೂ ಒಳ್ಳೆ ಪರಿಸರದ ವಾತಾವರಣ ಸೃಷ್ಟಿಸಿಕೊಳ್ಳೋಣ ಎಂದು ತಿಳಿಸಿದರು. ನಮ್ಮ ನಡೆ ಗಿಡ ನೆಡುವ ಕಡೆ ಎನ್ನುತ್ತಾ. ಪ್ರತಿಯೊಬ್ಬರನ್ನು ಗಿಡಗಳನ್ನು ಮಕ್ಕಳತರ ಬೆಳೆಸಿ ಎಂದು ತಿಳಿಸುತ್ತಾ, ಉಪಸ್ಥಿತರಿರುವ ಪ್ರತಿಯೊಬ್ಬರಿಗೆ ಸಸಿಗಳನ್ನು ವಿತರಣೆ ಮಾಡಲಾಯಿತು.



## “ಲಿಂಗ ಸಮಾನತೆ ಹಾಗೂ ಸ್ತ್ರೀ ಶಿಕ್ಷಣದ ಕುರಿತು ತರಬೇತಿ”



23 ಜುಲೈ 2025ರಂದು ಚಿಟಗುಪ್ಪಾ ತಾಲೂಕಿನ ವಡ್ಡನ್ಕೇರ ಗ್ರಾಮದಲ್ಲಿ ನರೇಗಾ ಗುಂಪಿನ ಸದಸ್ಯರಿಗೆ ಶ್ರೀಮತಿ ಅಮಿತಾ ರವರು ಲಿಂಗ ಸಮಾನತೆ ಹಾಗೂ ಸ್ತ್ರೀ ಶಿಕ್ಷಣದ ಕುರಿತು ತರಬೇತಿಯನ್ನು ಹಮ್ಮಿಕೊಂಡಿದ್ದರು. ಶ್ರೀ ಅರುಣ್ ಕುಮಾರ್, ಶ್ರೀಮತಿ ಭಾಗ್ಯಶ್ರೀ, ಶ್ರೀ ಅರುಣ್ ಕುಮಾರ್ ಕೋಟೆ, ಶ್ರೀಮತಿ ಗೀತಾ ಪ್ರೇರಣ ತಂಡದವರು ಭಾಗವಹಿಸಿ ಲಿಂಗ ಮತ್ತು ಲಿಂಗತ್ವ ವ್ಯತ್ಯಾಸದ ಕುರಿತು ಮಾಹಿತಿ ನೀಡಿದರು. ಲಿಂಗ ಎಂದರೆ? ದೈವದತ್ತವಾದದ್ದು. ಲಿಂಗತ್ವ ಎಂದರೆ? ಸಮಾಜದಲ್ಲಿ ತಕ್ಕಂತ ಕಟ್ಟುಪಾಡುಗಳು ಆಚಾರ ವಿಚಾರಗಳು. ಉದಾಹರಣೆಗೆ ಸಂಸ್ಕೃತಿ ಉಡುಗೆ ತೊಡುಗೆ, ಉಟೋಪಚಾರ, ಮೂಢನಂಬಿಕೆ ಆಗಿರುತ್ತವೆ ಎಂದು ತಿಳಿಸಲಾಯಿತು. ಶಿಕ್ಷಣ ಎನ್ನುವುದು ಸಮಾಜದಲ್ಲಿನ ಅಂಧಕಾರವನ್ನು ಹೋಗಲಾಡಿಸಿ ಬೆಳಕಿನತ್ತ ಕೊಂಡೊಯ್ಯುವ ಏಕೈಕ ಅಸ್ತ್ರ ಹಾಗಾಗಿ ಗಂಡು–ಹೆಣ್ಣು ಎನ್ನುವ ಭೇದಭಾವವಿಲ್ಲದೆ ಇಬ್ಬರಿಗೂ ಸಮಾನ ಶಿಕ್ಷಣ ಕೊಡಬೇಕೆಂದು ತಿಳಿಸಲಾಯಿತು. ಈ ತರಬೇತಿಯಲ್ಲಿ ನರೇಗಾ ಗುಂಪಿನ ಸದಸ್ಯರು ಭಾಗವಹಿಸಿ ಲಿಂಗ ಮತ್ತು ಲಿಂಗತ್ವದ ವ್ಯತ್ಯಾಸ ಹಾಗೂ ಸಮಾನ ಶಿಕ್ಷಣದ ಕುರಿತು ತಿಳಿದುಕೊಂಡರು.



## "ನಾಯಕತ್ವ ಗುಣಗಳು ಬೇಳೆಸಿಕೊಂಡು ತರಬೇತಿಯ ಮೂಲಕ ಸ್ವ-ಉದ್ಯೋಗದಲ್ಲಿ ತೊಡಗಿದ ಮಹೀಳೆ"



ನಾನು ಮಮಿತಾ ಗಂಡ ಸುಂದರ್ ಸಿತಾಳಗೇರಾ ಗ್ರಾಮದ ನೀವಾಸಿಯಾಗಿದ್ದೆನೆ. ನನಗೆ ಮೊದಲು ಸಂಘ ಎಂದರೆನು ಅದು ಹೇಗೆ ಮಾಡುತ್ತಾರೆ ಎಂಬುದರ ಅನುಭವ ಇರಲಿಲ್ಲ. ಮೊದಲಿಗೆ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಿಂದ ನಾಲ್ಕು ಸಂಘಗಳನ್ನು ರಚನೆ ಮಾಡಲಾಯಿತು. ಸಂಘಗಳನ್ನು ರಚನೆ ಮಾಡಿದನಂತರ ಅವುಗಳ ಗುರಿ ಉದ್ದೇಶಗಳನ್ನು ನಾನು ತೀಳಿದುಕೊಂಡಿದ್ದೆನೆ. ಹಾಗೆಯೇ ನಾಲ್ಕು ಸಂಘಗಳನ್ನು ಒಟ್ಟಿಗೆ ಸೇರಿಸಿ ಉದಯ ಮಹಾಸಂಗವನ್ನು ರಚನೆ ಮಾಡಲಾಯಿತು. ಮಹಾಸಂಘ ರಚನೆ ನಂತರ ನಾಯಕತ್ವದ ಗುಣ ಬೆಳೆಸಿಕೊಂಡು ಹಳ್ಳಿಯ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಗ್ರಾಮ ಪಂಚಾಯತ್ ಭೇಟಿ ಮಾಡುವುದರ ಜೊತೆಗೆ ಅರ್ಜಿಗಳನ್ನು ಸಲ್ಲಿಸಿ ನಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಶಕ್ತರಾಗಿದ್ದೇವೆ. ಹಾಗೆ ಸ್ವ-ಉದ್ಯೋಗ ತರಬೇತಿ ನೀಡುವುದರೊಂದಿಗೆ ನಮ್ಮನ್ನು ಉತ್ತೇಜಿಸಿದ್ದಾರೆ. ಇದರಿಂದ ಟೈಲರಿಂಗ್ ಮಷೀನ್‌ಅನ್ನು ತೆಗೆದುಕೊಂಡು ಇವಾಗ ಹಾಸಿಗೆಯನ್ನು ಹೊಲೆಯುತ್ತಿದ್ದೇನೆ ಇದರಿಂದ ನನಗೆ ದಿನಾಲು 200 ರಿಂದ 300 ಆದಾಯ ಬರುತ್ತಿದೆ. ನಮ್ಮ ಕುಟುಂಬದಲ್ಲಿ ಮಕ್ಕಳು ಚೆನ್ನಾಗಿ ಓದುತ್ತಿದ್ದಾರೆ ಎಲ್ಲರೂ ಸಂತೋಷದಿಂದ ಇದ್ದೇವೆ. ಇದಕ್ಕೆಲ್ಲ ಕಾರಣ ಆರ್ಬಿಟ್ ಸಂಸ್ಥೆ ಹಾಗಾಗಿ ಆರ್ಬಿಟ್ ಸಂಸ್ಥೆಗೆ ನನ್ನ ಹಾಗೂ ನನ್ನ ಕುಟುಂಬದ ಪರವಾಗಿ ಹೃತ್ಪೂರ್ವಕ ಧನ್ಯವಾದಗಳು ಸಲ್ಲಿಸುತ್ತೇನೆ ಎಂದು ಹೇಳಿಕೊಂಡಿದ್ದಾರೆ.

## "ಮಹಾಸಂಘ ಸಭೆಯ ನಾಯಕತ್ವ ಜವಾಬ್ದಾರಿಗಳು ಹಾಗೂ ಪರಿಸರ ಮಹತ್ವದ ಕುರಿತು ತರಬೇತಿ"



ಹುಮ್ನಾಬಾದ್ ತಾಲೂಕಿನ ಕಪರಗಾಂವ್ ಗ್ರಾಮದಲ್ಲಿ 12 ಜುಲೈ 2025ರಂದು ಆರ್ಬಿಟ್ ಸಂಸ್ಥೆ ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತರಾದ ಶ್ರೀಮತಿ ಸವಿತಾ ರವರು ಗಾಂಧಿ ಮಹಾಸಂಗದ ಸಭೆಯನ್ನು ಆಯೋಜಿಸಿದ್ದರು, ಸಂಪನ್ಮೂಲ ವ್ಯಕ್ತಿಯಾಗಿ ಸ್ಥಳೀಯ ಸಂಯೋಜಕರಾದ ಸಿಸ್ಟರ್ ಏಡ್ನಾ ರವರು ಗಾಂಧಿ ಮಹಾಸಂಗದಲ್ಲಿ ಆರು ಸಂಘಗಳನ್ನೊಳಗೊಂಡು ಸಭೆ ನಡೆಸುತ್ತಿರುವುದು ತುಂಬಾ ಸಂತಸದ ಸಂಗತಿ. ಮಹಾ ಸಂಘದ ಪ್ರತಿನಿಧಿಗಳಾದ ತಾವುಗಳು ಯಾರ ಮೇಲೆಯೂ ಅವಲಂಬನೆ ಆಗಿರದೆ ಪ್ರತಿಯೊಂದು ಸಂಘದ ಪದಾಧಿಕಾರಿಗಳು ತಾವೇ ಜವಾಬ್ದಾರಿಯನ್ನು ತೆಗೆದುಕೊಂಡು ಸಮಯಪಾಲನೆ ಮಾಡಿ ಅತ್ಯುತ್ತಮವಾಗಿ ಸಭೆಯನ್ನು ನಡೆಸಿಕೊಂಡು ಹೋಗಬೇಕು. ಸಂಘ ಮಹಾಸಂಗ ತಾಲೂಕು ಜಿಲ್ಲಾ ರಾಜ್ಯ ಮಟ್ಟದ ವರೆಗೆ ನಿಮ್ಮ ನಾಯಕತ್ವ ಹಾಗೂ ನಿಮ್ಮ ಧ್ವನಿ ತೋರಿಸುವಂತಿರಬೇಕು. ಹೀಗೆ ಹಂತ ಹಂತವಾಗಿ ಬೆಳೆಯುವುದರಿಂದ ಪ್ರತಿಯೊಬ್ಬರಲ್ಲಿಯೂ ನಾಯಕತ್ವ ಗುಣಗಳು ಬೆಳೆಯುತ್ತವೆ ಪ್ರತಿಯೊಬ್ಬರಲ್ಲಿಯೂ ಸಮಯ ಪಾಲನೆಯಾಗಬೇಕೆಂದು ಪ್ರೇರಣೆ ನೀಡಿದರು. ಜುಲೈ ತಿಂಗಳಲ್ಲಿ ವನಮೋತ್ಸವ ಕಾರ್ಯಕ್ರಮ ಇರುವುದರಿಂದ ತಮ್ಮ ಮಹಾಸಂಗದ ನೇತೃತ್ವದಲ್ಲಿ ತಾವೇ ಚಿಕ್ಕದಾದ ಕಾರ್ಯಕ್ರಮವನ್ನು ಮಾಡಿ ಗಿಡಗಳನ್ನು ಹಚ್ಚಿ ಬೆಳೆಸಿ. ಪರಿಸರವನ್ನು ಉಳಿಸುವ ಕಾರ್ಯವನ್ನು ತಾವೆಲ್ಲರೂ ಮಾಡಬೇಕೆಂದು ತಿಳಿಸಿದರು. 19 ಮಹಿಳೆಯರು ಮಹಾಸಂಗದಲ್ಲಿ ಭಾಗವಹಿಸಿ ನಾಯಕತ್ವ ಜವಾಬ್ದಾರಿಗಳ ಹಾಗೂ ಪರಿಸರ ಮಹತ್ವದ ಕುರಿತು ಮಾಹಿತಿಯನ್ನು ಪಡೆದುಕೊಂಡರು.

## "ವನಮಹೋತ್ಸವ ಕಾರ್ಯಕ್ರಮ – ಪ್ರೇಮಾಂಜಲಿ ಹೈಸ್ಕೂಲ್, ಉಜಿನಿ"



19 ಜುಲೈ 2025ರಂದು ಉಜಿನಿಯ ಪ್ರೇಮಾಂಜಲಿ ಹೈಸ್ಕೂಲ್‌ನಲ್ಲಿ ವನಮಹೋತ್ಸವ ಕಾರ್ಯಕ್ರಮವನ್ನು ಭವ್ಯವಾಗಿ ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಸಂತಪುರ ಅರಣ್ಯ ಇಲಾಖೆಯ ಮಿಸ್. ಸುಜಾತಾ ಅವರು ಭಾಗವಹಿಸಿದರು. ಈ ಕಾರ್ಯಕ್ರಮದಲ್ಲಿ ಶಾಲಾ ಮುಖ್ಯಶಿಕ್ಷಕರು ವಿದ್ಯಾರ್ಥಿಗಳಿಗೆ ಸ್ವಾಗತ ಕೋರಿದರು. ನಂತರ ಮುಖ್ಯ ಅತಿಥಿ ಮಿಸ್. ಸುಜಾತಾ ಅವರು ವಿದ್ಯಾರ್ಥಿಗಳಿಗೆ ವನಮಹೋತ್ಸವದ ಮಹತ್ವವನ್ನು ವಿವರಿಸಿ ಪ್ರೇರಣಾದಾಯಕ ಸಂದೇಶ ನೀಡಿದರು. "ಮರಗಳು ನಮ್ಮ ಜೀವಾಳ, ಅವುಗಳಿಲ್ಲದೆ ಭೂಮಿಯಲ್ಲಿ ಬದುಕು ಸಾಧ್ಯವಿಲ್ಲ. ಪ್ರತಿಯೊಬ್ಬ ವಿದ್ಯಾರ್ಥಿಯೂ ವರ್ಷಕ್ಕೊಮ್ಮೆ ಒಂದು ಗಿಡ ನೆಟ್ಟು ಅದನ್ನು ಬೆಳೆಯುವ ಜವಾಬ್ದಾರಿ ತೆಗೆದುಕೊಳ್ಳಬೇಕು. ಪರಿಸರವನ್ನು ರಕ್ಷಿಸುವುದು ನಮ್ಮೆಲ್ಲರ ಕರ್ತವ್ಯ." ಎಂದು ಸಂದೇಶವನ್ನು ನೀಡಿದರು. ವನಮಹೋತ್ಸವದ ಅಂಗವಾಗಿ ಶಾಲೆಯ ಆವರಣದಲ್ಲಿ ಹಲವು ಸಸಿಗಳನ್ನು ನೆಡುವ ಮೂಲಕ ಹಾಗೂ ಗಿಡಗಳನ್ನು ಕಾಪಾಡುವ ಪ್ರತಿಜ್ಞೆ ತೆಗೆದುಕೊಂಡರು. ಶಾಲಾ ಆವರಣ ಹಸಿರುಗೂಡುವುದರ ಜೊತೆಗೆ, ವಿದ್ಯಾರ್ಥಿಗಳು ಹಸಿರು ಪರಿಸರದ ಸಂರಕ್ಷಣೆಯಲ್ಲಿ ತಮ್ಮ ಪಾತ್ರವನ್ನು ನಿರ್ವಹಿಸುವುದಾಗಿ ಭರವಸೆ ನೀಡಿದರು. ಅಂತಿಮವಾಗಿ ಶಾಲಾ ಮುಖ್ಯಶಿಕ್ಷಕರು ಎಲ್ಲರಿಗೂ ಧನ್ಯವಾದಗಳನ್ನು ಸಲ್ಲಿಸಿದರು. ಈ ವನಮಹೋತ್ಸವ ಕಾರ್ಯಕ್ರಮದಲ್ಲಿ ಒಟ್ಟು 110 ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## “ವನಮಹೋತ್ಸವ ಕಾರ್ಯಕ್ರಮ”



18 ಜುಲೈ 2025ರಂದು ಆರ್ಬಿಟ್ ಸಂಯುಕ್ತ ಆಶ್ರಯದಲ್ಲಿ ಬೀದರ ವಲಯದಲ್ಲಿ ಬರುವ ಸವಿತಾ ಹಾಗೂ ಅಕ್ಷರ ಸ್ವ-ಸಹಾಯ ಸಂಘದ ಮಹೀಳೆಯರಿಗೆ ಜನಜಾಗೃತಿ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ರೋಜಮೇರಿಅವರು ವನಮಹೋತ್ಸವ ಕಾರ್ಯಕ್ರಮವನ್ನು ಏರ್ಪಡಿಸಿದರು. ಸಸ್ಯಗಳನ್ನು ನೆಡುವುದರ ಮೂಲಕ ಸಂಘದ ಮಹಿಳೆಯರಿಗೆ ಪರಿಸರದ ಬಗ್ಗೆ ಜಾಗೃತಿ ನೀಡಿದರು. ಪರಿಸರ ಸಂರಕ್ಷಣೆ ಮತ್ತು ಸಸ್ಯಗಳನ್ನು ನೆರವಾದರಿಂದ ಒಳ್ಳೆಯ ಗಾಳಿ ಮಳೆ ಸೇರಿದಂತೆ ಉತ್ತಮ ವಾತಾವರಣ ಸಿಗುತ್ತದೆ. ಪ್ರಕೃತಿ ಉತ್ತಮವಾಗಿದ್ದರೆ ಮಾತ್ರ ನಾವೆಲ್ಲರೂ ಚಂದವಾದ ಉತ್ತಮವಾಗಿ ಬದುಕಲು ಆರೋಗ್ಯವಂತರಾಗಿ ಜೀವಿಸಲು ನಮಗೆ ಸಾಧ್ಯವಾಗಿದೆ ಎಂದು ತಿಳಿಸಲಾಯಿತು.

## “ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ”

### “ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳಿಗೆ ಕೇಂದ್ರ ಆಧಾರಿತ ಚಟುವಟಿ”



17 ಜುಲೈ 2025ರಂದು ಹುಮನಾಬಾದ್ ತಾಲೂಕಿನ ಮೊಳ್ಕೆರಾ ಗ್ರಾಮದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಕಾರ್ಯಕರ್ತೆ ಶ್ರೀಮತಿ ಕವಿತಾ ರವರು ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳಿಗೆ ಅಂಗನವಾಡಿ ಕೇಂದ್ರದಲ್ಲಿ ಕಾರ್ಯಕರ್ತರ ಸಹಾಯದಿಂದ ಕೇಂದ್ರ ಆಧಾರಿತ ಚಟುವಟಿಕೆಯನ್ನು ಅಂಕಿ ಸಂಖ್ಯೆಗಳ ಮುಖಾಂತರ ಬರೆಯುವುದು ಹಾಗೂ ಅಕ್ಷರಗಳು ಜೋಡಿಸಿ ಅಮ್ಮ-ಅಪ್ಪ ಅನ್ನುವ ಎರಡು ಅಕ್ಷರದಿಂದ ಮಾತಾಡುವುದನ್ನು ಹೇಳಿಕೊಡಲಾಯಿತು. ಕೇಂದ್ರದಲ್ಲಿ ಒಳ್ಳೆಯ ಮಕ್ಕಳ ಜೊತೆ ಕುಂಠಿತ ಮಕ್ಕಳು ಬೆರೆತು ಚಟುವಟಿಕೆ ಮಾಡುವುದನ್ನು ಹೇಳಿಕೊಡಲಾಯಿತು. ಬಣ್ಣಗಳ ಹೆಸರು ಪ್ರಾಣಿಗಳ ಚಿತ್ರಗಳನ್ನು ತೋರಿಸಿ ಶಬ್ದ ಯಾವ ರೀತಿ ಮಾಡುತ್ತದೆ ಎಂದು ಹೇಳಿಕೊಡಲಾಯಿತು. ದೇಹದ ಭಾಗಗಳ ಹೆಸರು ಗುರುತಿಸುವುದನ್ನು ಹೇಳಿಕೊಡಲಾಯಿತು. ಮನೆಯಲ್ಲಿ ದಿನನಿತ್ಯ ಪೋಷಕರು ಕೂಡ ಮಕ್ಕಳಿಗೆ ಚಟುವಟಿಕೆ ಮಾಡಿಸುವುದನ್ನು ಅತ್ಯಂತ ಅವಶ್ಯಕವಾಗಿದೆ ಎಂದು ಮಾಹಿತಿಯನ್ನು ತಿಳಿಸಲಾಯಿತು.

### “ಬೆಳವಣಿಗೆಯಲ್ಲಿ ಕುಂಟಿತ ಹೊಂದಿರುವ ಮಕ್ಕಳಿಗೆ ಮನೆ ಆಧಾರಿತ ಚಟುವಟಿಕೆ”



15 ಜುಲೈ 2025ರಂದು ಹುಮ್ನಾಬಾದ್ ತಾಲೂಕಿನ ಹುಣಸನಾಳ ಗ್ರಾಮದಲ್ಲಿ ಶೀಘ್ರ ಪತ್ತೆ ಹಚ್ಚುವಕ್ಕೆ ಮತ್ತು ಆರಂಭ ಶಿಕ್ಷಣ ಕಾರ್ಯಕ್ರಮದ ಅಡಿಯಲ್ಲಿ ಬೆಳವಣಿಗೆಯಲ್ಲಿ ಕುಂಟಿತ ಹೊಂದಿರುವ ಮಕ್ಕಳಿಗೆ ಮನೆ ಆಧಾರಿತ ಚಟುವಟಿಕೆ ಮಾಡಿಸಲಾಯಿತು. ಮಕ್ಕಳಿಗೆ ಹೊರಳಾಡುವ ಚಟುವಟಿಕೆ, ಕುಳಿತುಕೊಳ್ಳುವ ಚಟುವಟಿಕೆ, ಒಂದೇ ಕಡೆ ಅವಲೋಕನ ಮಾಡುವ ಚಟುವಟಿಕೆ, ಎದ್ದು ನಿಲ್ಲವ ಚಟುವಟಿಕೆ ಜೊತೆಗೆ ಬರವಣಿಗೆ ಕೌಶಲ್ಯ ಮತ್ತು ಓದುವ ಕೌಶಲ್ಯ ತಿಳಿಸಿಕೊಡಲಾಯಿತು. ಮಕ್ಕಳು ಬಣ್ಣಗಳನ್ನು ಗುರುತಿಸುವ ಚಟುವಟಿಕೆ ಬಣ್ಣಗಳ ಆಧಾರದ ಮೇಲೆ ಮನೆಯಲ್ಲಿ ಬಳಸುವ ತರಕಾರಿಗಳನ್ನು ಗುರುತಿಸುವ ಚಟುವಟಿಕೆ ಕೈಗೊಳ್ಳಲಾಯಿತು. ಮಕ್ಕಳಿಗೆ ದಿನನಿತ್ಯ ಪಾಲಕರು ಮನೆಯಲ್ಲಿ ಚಟುವಟಿಕೆಯನ್ನು ಮಾಡಿಸಲು ತಿಳಿಸಲಾಯಿತು. ಮಕ್ಕಳಿಗೆ ಆಸಕ್ತಿ ಬರುವ ಹಾಗೆ ಆಟಗಳ ಮೂಲಕ ಮತ್ತು ಅವರಿಗೆ ಇಷ್ಟವಿರುವ ವಸ್ತುಗಳ ಜೊತೆಗೆ ಆಟವಾಡಲು ಹೆಚ್ಚಿನ ಒತ್ತು ನೀಡಬೇಕೆಂದು ತಿಳಿಸಲಾಯಿತು.

### “ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ ಕುರಿತು ಜಾಗೃತಿ ಕಾರ್ಯಕ್ರಮ”



16 ಜುಲೈ 2025ರಂದು ಹುಮ್ನಾಬಾದ್ ತಾಲೂಕಿನ ಹಳ್ಳಿಖೇಡ (ಬಿ) ಉಪ ಕೇಂದ್ರದಲ್ಲಿ, ಆರ್ಬಿಟ್ ಸಂಸ್ಥೆಯ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಮಮತಾ ರವರು, ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳಲ್ಲಿ ಕಂಡುಬರುವ ಪ್ರಮುಖವಾದ ಸಮಸ್ಯೆಗಳ ಬಗ್ಗೆ ತಿಳಿಸಿದರು. ದೃಷ್ಟಿ ಗ್ರಹಕ್ಕೆ, ಗಾತ್ರ, ಆಕಾರ, ಸಂಖ್ಯೆಗಳ ಪರಿಕಲ್ಪನೆ, ಮಾತಿನ ಬೆಳವಣಿಗೆ, ದೈಹಿಕ ಬೆಳವಣಿಗೆ, ಭೌತಿಕ ಬೆಳವಣಿಗೆ ಹೀಗೆ ಮಕ್ಕಳಲ್ಲಿ ಹಲವಾರು ಸಮಸ್ಯೆಗಳನ್ನು ನೋಡಬಹುದಾಗುತ್ತದೆ. ನಮ್ಮ ಮಕ್ಕಳ ಸ್ವತಂತ್ರವಾಗಿ ದಿನನಿತ್ಯ ಚಟುವಟಿಕೆ ಮಾಡದೆ ಇದ್ದ ಸಂದರ್ಭದಲ್ಲಿ ಆರ್ಬಿಟ್ ಸಂಸ್ಥೆಗೆ ತಿಳಿಸುವುದು. ನಾವು ಮೌಲ್ಯಮಾಪನದ ಮುಖಾಂತರ ಮಕ್ಕಳ ಚಟುವಟಿಕೆಗಳನ್ನು ಹೇಳಿಕೊಡುತ್ತೇವೆ ಎಂದು ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸಮುದಾಯದ ಒಟ್ಟು 22 ಜನರು ಭಾಗವಹಿಸಿದರು ಇದರ ಸದುಪಯೋಗ ಪಡೆದುಕೊಂಡರು.

# "ನವಜೀವನ (ಎ.ಪಿ.ಎಫ್) ಕಾರ್ಯಕ್ರಮ"

## "ವಿಶೇಷ ವಿಕಲಚೇತನರ ಸಂಘದ ಸಭೆ"



08 ಜುಲೈ 2025ರಂದು ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಮತ್ತು ಅಜೀಮ್ ಪ್ರೇಮ್‌ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ, ನಿಂಬುರ್ ಗ್ರಾಮಕ್ಕೆ ಭೇಟಿ ನೀಡಿ ಮಾನಸಿಕ ಅಸ್ವಸ್ಥರ ಮನೆಗಳಿಗೆ ಹೋಗಿ ಅವರ ಆರೋಗ್ಯವನ್ನು ವಿಚಾರಿಸಲಾಯಿತು, ನಂತರ ಅಂಬೇಡ್ಕರ್ ವಿಶೇಷ ವಿಕಲಚೇತನರ ಸಂಘದ ಸಭೆ ಸೇರಲಾಯಿತು, ಮಾತ್ರೆಗಳನ್ನು ಸೇವಿಸಿ ಸುಮಾರು 60 ರಿಂದ 70 ಪ್ರತಿಶತ ಗುಣಮುಖರಾದ ಫಲಾನುಭವಿಗಳಿಗೆ, ಉಚಿತವಾಗಿ ಸ್ವ-ಉದ್ಯೋಗ ನಡೆಸಲು ಹಣದ ಸಹಾಯ ಮತ್ತು ಕುರಿಗಳನ್ನು ನೀಡುತ್ತಿದ್ದು, ಇದರ ಸದುಪಯೋಗ ಪಡೆದುಕೊಂಡು, ತಮ್ಮ ಜೀವನವನ್ನು ಸುಧಾರಿಸಿಕೊಳ್ಳಬೇಕು. ಹಾಗೂ ಕುಟುಂಬದ ಆರ್ಥಿಕ ಮಟ್ಟವನ್ನು ಹೆಚ್ಚಿಸಿಕೊಳ್ಳಬೇಕೆಂದು. ಸಮಾಜದಲ್ಲಿ ಉತ್ತಮ ನಾಗರಿಕರ ಜೀವನವನ್ನು ನಡೆಸಬೇಕೆಂದು ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಡೇವಿಡ್ ರವರು ಸಭೆಗೆ ಬಂದ ಫಲಾನುಭವಿಗಳಿಗೆ ಮಾಹಿತಿಯನ್ನು ತಿಳಿಸಿಕೊಟ್ಟರು. ಮಾಹಿತಿಯನ್ನು ಸ್ವೀಕರಿಸಿದ ಸಂಘದ ಸದಸ್ಯರು ತಮ್ಮ ಜೀವನದ ಬಗ್ಗೆ ಕಾಳಜಿಯನ್ನು ವಹಿಸಿದ ಹಾಗೂ ಕನಿಕರ ತೋರಿಸಿದ ಸಂಸ್ಥೆ ನಿರ್ದೇಶಕರಿಗೆ ತುಂಬು ಹೃದಯದ ಧನ್ಯವಾದಗಳು ತಿಳಿಸಿದರು.

## "ವಿಶೇಷ ವಿಕಲಚೇತನರ ಸಂಘದ ಸಭೆ"



09 ಜುಲೈ 2025ರಂದು ಹುಮ್ನಾಬಾದ್ ನಗರದ ವಾಂಜರಿ ಕಾಲೋನಿಯಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಜ್ಯೋತಿ ವಿಶೇಷ ವಿಕಲಚೇತನರ ಸಂಘದ ಸಭೆ ಮಾಡಲಾಯಿತು. ಈ ಸಭೆಯಲ್ಲಿ ಸಂಘದ ಸದಸ್ಯರಿಗೆ ಪರಿಸರದ ಕುರಿತು ಅರಿವು ಮೂಡಿಸಲಾಯಿತು. ಪರಿಸರ ನಮ್ಮ ಜೀವನದ ಮೂಲಭೂತ ಅಂಶವಾಗಿದೆ. ಪ್ರತಿಯೊಬ್ಬ ವ್ಯಕ್ತಿಯು ಪರಿಸರದ ರಕ್ಷಣೆಯಲ್ಲಿ ಭಾಗವಹಿಸುವುದು ಅಗತ್ಯವಾಗಿದೆ. ಪ್ರಕೃತಿ ನಮ್ಮ ಜೀವನದ ಮೂಲ. ಪರಿಸರ ಹಾಳಾದರೆ ನಾವು ಜೀವಿಸಲು ಸಾಧ್ಯವಿಲ್ಲ. ಪ್ರಕೃತಿ ರಕ್ಷಿಸುವ ಜವಾಬ್ದಾರಿಯನ್ನು ಎಲ್ಲರೂ ತೆಗೆದುಕೊಳ್ಳಬೇಕು. ನಾವು ಉಸಿರಾಡಲು ಗಾಳಿ, ಕುಡಿಯುವ ನೀರು ಮತ್ತು ಬೆಳೆದ ಆಹಾರವನ್ನು ಒದಗಿಸುತ್ತದೆ. ನಾವು ಪರಿಸರವನ್ನು ಉಳಿಸಲು ಕ್ರಮಗಳನ್ನು ತೆಗೆದುಕೊಳ್ಳಬೇಕು. ನಮ್ಮ ಮುಂದಿನ ಪೀಳಿಗೆಗೆ ಸ್ವಚ್ಛ ಮತ್ತು ಆರೋಗ್ಯಕರ ಪರಿಸರವನ್ನು ಒದಗಿಸಲು ನಾವು ಪ್ರಯತ್ನಿಸಬೇಕು ಎಂದು ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ನೀಲಕಂಠ ರವರು ಸದಸ್ಯರಿಗೆ ಮಾಹಿತಿ ನೀಡಿದರು

## "ಕ್ಷೇತ್ರ ಆಧಾರಿತ ಸಿಬ್ಬಂದಿ ಸಾಮರ್ಥ್ಯ ಬಲ್ಲವರ್ಧನೆ ತರಬೇತಿ"

ಜುಲೈ ತಿಂಗಳ 14.15 2025ರಂದು ಹುಮನಾಬಾದ್ ತಾಲೂಕಿನ ಕಲ್ಲೂರ್, ದುಮ್ಮನಸೂರ್ ಹಾಗೂ ಇಂದಿರಾನಗರ ಗ್ರಾಮಗಳಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ, ನವಜೀವನ ಕಾರ್ಯಕ್ರಮದ ಸಿಬ್ಬಂದಿ ವರ್ಗದವರಿಗೆ ಎರಡು ದಿವಸದ ಕ್ಷೇತ್ರ ಆಧಾರಿತ ಸಿಬ್ಬಂದಿ ಸಾಮರ್ಥ್ಯ ಬಲ್ಲವರ್ಧನೆ ತರಬೇತಿ ಹಮ್ಮಿಕೊಳ್ಳಲಾಯಿತು. ಈ ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಎ.ಪಿ.ಡಿ ಸಂಸ್ಥೆಯ ವಿಭಾಗಿ ವ್ಯವಸ್ಥಾಪಕರಾದ ಶ್ರೀ ಸಂತೋಷ್ ರವರು ತರಬೇತಿಯನ್ನು ನೀಡಿದರು. ಕುಟುಂಬದ ಸದಸ್ಯರ ಸಮಸ್ಯೆಗಳನ್ನು ಆಲಿಸಿ ಅದಕ್ಕನುಸಾರವಾಗಿ ಅವರನ್ನು ಮಾರ್ಗದರ್ಶನವನ್ನು ನೀಡಿ ಪರಿಹಾರ ಕಂಡುಕೊಳ್ಳುವಲ್ಲಿ ಸಹಾಯ ಮಾಡುವುದು. ಹಾಗೂ ಚಿಕಿತ್ಸೆಯ ಸಂಪೂರ್ಣ ಮಾಹಿತಿಯನ್ನು ಕಾರ್ಯಕರ್ತರು ಹೊಂದಿರತಕ್ಕದ್ದು. ಯಾಕೆಂದರೆ ಫಲಾನುಭವಿಗಳಿಗೆ ಯಾವುದೇ ರೀತಿಯ ತೊಂದರೆಗಳು ಆಗದ ರೀತಿಯಲ್ಲಿ ಚಿಕಿತ್ಸೆ ಕೊಡಿಸುವಲ್ಲಿ ಸಹಕಾರಿಯಾಗುತ್ತದೆ ಎಂದು ತರಬೇತಿಯಲ್ಲಿ ತಿಳಿಸಿದರು.





## “ಮಾನಸಿಕ ಅಸ್ವಸ್ಥತೆಯ ಬಗ್ಗೆ ಮಾಹಿತಿ ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತ ಔಷಧಿ”



10 ಜುಲೈ 2025ರಂದು ಹುಮ್ನಾಬಾದ್ ತಾಲೂಕಿನ ಕನಕಟ್ಟಾ ಗ್ರಾಮದ ಸಾರ್ವಜನಿಕರಿಗೆ ಮಾನಸಿಕ ಅಸ್ವಸ್ಥತೆಯ ಬಗ್ಗೆ ಮಾಹಿತಿ ನೀಡಿ ಮತ್ತು ಅವರಿಗೆ ಸರಕಾರದಿಂದ ಸಿಗುವ ಉಚಿತ ಔಷಧಿ ಬಗ್ಗೆ ಮಾಹಿತಿ ತಿಳಿಸಲಾಯಿತು ಒಟ್ಟು 15 ಸದಸ್ಯರಿಗೆ ಮತ್ತು ಅವರಿಗೆ ಪಾಂಪ್ಲೆಟ್ಗಳು ಸಹ ಹಂಚಲಾಯಿತು. ನಿಮ್ಮ ಗ್ರಾಮದಲ್ಲಿ ನೀವು ಮಾನಸಿಕ ಅಸ್ವಸ್ಥರ ಕಾಯಿಲೆಯ ಲಕ್ಷಣವುಳ್ಳ ವ್ಯಕ್ತಿಗಳನ್ನು ಕಂಡಿದ್ದರೆ ಅವರಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರು ಬರುತ್ತಾರೆ. ಪ್ರತಿ ಬುಧವಾರ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 1:00 ವರೆಗೆ ಇರುತ್ತಾರೆ. ಅದಕ್ಕೆ ನಿಮ್ಮ ಗ್ರಾಮದಲ್ಲಾಗಲಿ ಬೇರೆಯಲ್ಲಾಗಲಿ ಮಾನಸಿಕ ಅಸ್ವಸ್ಥತೆಯುಳ್ಳವರು ಕಂಡಿದ್ದಲ್ಲಿ ಇವರನ್ನು ಚಿಕಿತ್ಸೆ ಸಿಗುವಂತೆ ನೀವು ನಿಮ್ಮ ಗ್ರಾಮದವರಿಗೆ ಸಹಾಯ ಮಾಡಿರಿ ಎಂದು ಮಾಹಿತಿ ನೀಡಿದರು.

## “ವಿಶೇಷ ವಿಕಲ ಚೇತನರ ಪೋಷಕರ ಸಂಘದ ಸಭೆ”



08 ಜುಲೈ 2025ರಂದು ಹುಮನಾಬಾದ ತಾಲೂಕಿನ ಘಾಟಬೋರಾಳ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತಾಶ್ರಯದಲ್ಲಿ ಜೈ ಶ್ರೀ ಬಾಲಾಜಿ ವಿಶೇಷ ವಿಕಲ ಚೇತನರ ಪೋಷಕರ ಸಂಘದ ಸಭೆಯನ್ನು ಮಾಡಲಾಯಿತು. ಈ ಸಭೆಯಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಪೂಜಾ ರವರು ಸಭೆಗೆ ಸೇರಿರುವ ಒಟ್ಟು 6 ಜನ ಸದಸ್ಯರಿಗೆ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ. ಮಾನಸಿಕ ಅಸ್ವಸ್ಥರ ದಿನ ನಿತ್ಯದ ಚಟುವಟಿಕೆಗಳ ಬಗ್ಗೆ ಅವರ ಆರೋಗ್ಯದ ಬಗ್ಗೆ ವಿಚಾರಿಸಿ ನಿರಂತರ ಚಿಕಿತ್ಸೆ ಬಗ್ಗೆ ಕುಟುಂಬದ ಪಾತ್ರ ಮತ್ತು ಮಾತ್ರೆಗಳು ಸಿಗದೆ ಇರುವ ಸಂಧರ್ಭದಲ್ಲಿ ಸಭೆಯ ಸದಸ್ಯರು ಒಟ್ಟು ಸೇರಿ ಯಾವರೀತಿಯಾಗಿ ವಕಾಲತ್ತು ಮತ್ತು ಲಾಬಿ ಮಾಡಬೇಕು ಎನ್ನುವ ಕುರಿತು ಮಾಹಿತಿ ನೀಡಲಾಯಿತು.

## “ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತ ಔಷಧಿ”



08 ಜುಲೈ 2025ರಂದು ಹುಮ್ನಾಬಾದ್ ತಾಲೂಕಿನ ಸೇಡೋಳ್ ಗ್ರಾಮ ಪಂಚಾಯಿತಿದಲ್ಲಿ, ಉದ್ಯೋಗ ಖಾತ್ರೆ  ಮಹಿಳೆಯರಿಗೆ ಮಾನಸಿಕ ಅಸ್ವಸ್ಥರ ಬಗ್ಗೆ ಅರಿವು ಮೂಡಿಸಲಾಯಿತು. ಈ ಕಾರ್ಯಕ್ರಮವು ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದ ಆರ್ಬಿಟ್ ಸಂಸ್ಥೆಯ ನೇತೃತ್ವದಲ್ಲಿ ಮಾನಸಿಕ ಅಸ್ವಸ್ಥರ ಕಾರ್ಯಕ್ರಮವನ್ನುಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ  ಕಾರ್ಯಕರ್ತೆ ಶ್ರೀಮತಿ ಮಹಾದೇವಿ ಇವರು ಒಟ್ಟು 48 ಜನರಿಗೆ ಮಾನಸಿಕ ಅಸ್ವಸ್ಥರ ಬಗ್ಗೆ ಅರಿವು ಮೂಡಿಸಿದರು. ಹಾಗೂ ಅವರಿಗೆ ಸರ್ಕಾರದಿಂದ ಸಿಗುವ ಸೌಲಭ್ಯ ಬಗ್ಗೆ ಮಾಹಿತಿ ತಿಳಿಸಿದರು. ಮಾನಸಿಕ ಕಾಯಿಲೆ ಒಂದು ಮೆದುಳಿನ ಕಾಯಿಲೆ ಈ ರೋಗಕ್ಕೆ ಔಷಧಿ ಇದೆ. ಪ್ರತಿ ಬುಧವಾರ ಸರ್ಕಾರಿ ಆಸ್ಪತ್ರೆಯಲ್ಲಿ ಡಾ. ಬರುತ್ತಾರೆ ಮಾನಸಿಕ ಕಾಯಿಲೆ ತಪಾಸಣೆ ಮಾಡಿ ಒಂದು ತಿಂಗಳ ಔಷಧಿಯನ್ನು ಕೊಡುತ್ತಾರೆ. ಹಾಗಾಗಿ ನಿಮ್ಮ ಹಳ್ಳಿಯಲ್ಲಿ ಯಾರಾದರೂ ಇದ್ದರೆ ಅವರಿಗೆ ಹೇಳಿರಿ ಎಂದು ತಿಳಿಸಲಾಯಿತು. ಹುಮ್ನಾಬಾದ್ ತಾಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರತಿ ಬುಧವಾರ ಡಾಕ್ಟರ್ ಬರುತ್ತಾರೆ ಅವರನ್ನು ತಪಾಸಣೆ ಮಾಡಿ ಅವರಿಗೆ ಉಚಿತ ಔಷಧಿಯನ್ನು ಕೊಡುತ್ತಾರೆ ಎಂದು ತಿಳಿಸಲಾಯಿತು.

## “ಒಂದು ದಿವಸದ ಜೀವನೋಪಾಯ ಕೌಶಲ್ಯ ತರಬೇತಿ ಕಾರ್ಯಗಾರ”



17 ಜುಲೈ 2025ರಂದು ಹುಮ್ನಾಬಾದ್ ನಗರದ ಆರ್ಬಿಟ್ ಸಂಸ್ಥೆಯ ಸಭಾಂಗಣದಲ್ಲಿ ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಮತ್ತು ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಫಲಾನುಭವಿಗಳಿಗೆ ಒಂದು ದಿವಸದ ಜೀವನೋಪಾಯ ಕೌಶಲ್ಯ ತರಬೇತಿ ಕಾರ್ಯಗಾರವನ್ನು ನಡೆಸಲಾಯಿತು. ಈ ಕಾರ್ಯಗಾರಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಡಾಕ್ಟರ್ ಶಾಂತಕುಮಾರ್ ಸಿದ್ದೇಶ್ವರ ಪಶು ವೈದ್ಯಾಧಿಕಾರಿಗಳು ಹುಡುಗಿ ಇವರು ಆಗಮಿಸಿ ಫಲಾನುಭವಿಗಳಿಗೆ ಕುರಿ ಸಾಗಾಣಿಕೆ ಹೇಗೆ ಮಾಡಬೇಕು ಕುರಿಗಳಲ್ಲಿ ಎಷ್ಟು ಪ್ರಕಾರದ ಕುರಿಗಳಿವೆ, ಎಷ್ಟು ತಳಿಗಳಿವೆ ಅವುಗಳನ್ನು ಹೇಗೆ ನಿರ್ವಹಣೆ ಮಾಡಬೇಕೆಂದು ಸಂಪೂರ್ಣವಾದ ಮಾಹಿತಿಯನ್ನು ನೀಡಿದರು. ಈ ತರಬೇತಿ ಕಾರ್ಯಗಾರದಲ್ಲಿ ಒಟ್ಟು 36 ಫಲಾನುಭವಿಗಳು ಮತ್ತು ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಸಿಬ್ಬಂದಿ ವರ್ಗದವರು ಭಾಗವಹಿಸಿ ಇದರ ಸದುಪಯೋಗ ಪಡೆದುಕೊಂಡಿರುತಾರೆ.

## “ಸಮುದಾಯ ಆಧಾರಿತ ಪುನರ್ವಸತಿ ಕಾರ್ಯಕ್ರಮದ ಆಪ್ತ ಸಮಾಲೋಚನೆ”



ಹುಮ್ನಾಬಾದ್ ತಾಲೂಕಿನ ಹಳ್ಳಿಖೇಡ (ಬಿ) ಪಟ್ಟಣದಲ್ಲಿ ಜುಲೈ 2025ರಂದು ನವಜೀವನ ಎ.ಪಿ.ಎಫ್ ಯೋಜನೆ ಅಡಿಯಲ್ಲಿ ಮಾನಸಿಕ ಅಸ್ವಸ್ಥರ ಸಮುದಾಯ ಆಧಾರಿತ ಪುನರ್ವಸತಿ ಕಾರ್ಯಕ್ರಮದ ಆಪ್ತ ಸಮಾಲೋಚನೆಯು ಕ್ಷೇತ್ರ ಆಧಾರಿತವಾಗಿದು. ಪ್ರಾಥಮಿಕ ಆರೋಗ್ಯ ಕೇಂದ್ರ ಹಳಿಖೇಡ (ಬಿ) ಫಲಾನುಭವಿಗಳಿಗೆ ಆಪ್ತ ಸಮಾಲೋಚನೆ ಒಳಪಡಿಸಲಾಯಿತು. ಆಪ್ತ ಸಮಾಲೋಚನೆಯಲ್ಲಿ ಫಲಾನುಭವಿಗಳು ಹೇಳಿಕೊಂಡ ಪ್ರಮುಖ ವಿಷಯಗಳು. ಅನೇಕ ಸಲ ಔಷಧ ಸೇವನೆಗೆ ಮರೆಯುವ ಸ್ಥಿತಿ ಆಗುತ್ತಿದೆ. ಮನೆಯವರಿಂದ ತುಂಬಾ ಒತ್ತಡ ಇರುತ್ತದೆ ಹಾಗೂ ತಂದೆ, ತಾಯಿ, ಮಕ್ಕಳು ಪತ್ನಿ ಕೆಲವೊಂದು ಸಲ ನಮ್ಮ ಮಾತುಗಳಿಗೆ ಸಹಕರಿಸುತ್ತಿಲ್ಲ. ತಾನೊಬ್ಬನೇ ಇದ್ದಂತೆ ಕುಟುಂಬದಲ್ಲಿ ಎಲ್ಲರೂ ನನ್ನನ್ನು ಭಾವಿಸುತ್ತಿದ್ದಾರೆ. ನಮ್ಮ ಕೌಟುಂಬಿಕದಲ್ಲಿ ಆರ್ಥಿಕ ಪರಿಸ್ಥಿತಿ ಹದಗೆಟ್ಟಿರುತ್ತದೆ. ನಮ್ಮ ಜೀವನದಲ್ಲಿ ಕೆಲಸ ಇಲ್ಲದಿರುವುದರಿಂದ ಖರ್ಚನ್ನು ನಿಭಾಯಿಸಲು ಆಗುತ್ತಿಲ್ಲ. ಮುಂದಿನ ದಿನಗಳಲ್ಲಿ ಉತ್ತಮ ಆರೋಗ್ಯ ಬೇಕೆಂಬ ಆಶಯವಿದೆ. ಆದ್ದರಿಂದ ಅನೇಕ ಸಲ ಆಪ್ತ ಸಮಾಲೋಚನೆಯಲ್ಲಿ ಮತ್ತು ನಿರಂತರ ಚಿಕಿತ್ಸೆ ಹಾಗೂ ಮನೋವೈದ್ಯರ ಸಲಹೆ ಸೂಚನೆಗಳನ್ನು ಪಾಲಿಸುತ್ತಿದ್ದೇವೆ. ಎಂದು ತಿಳಿಸಿದ್ದಾರೆ. ಹೊಸ ಫಲಾನುಭವಿಗಳನ್ನು ಆಪ್ತ ಸಮಾಲೋಚನಯಲ್ಲಿ ಒಳಪಡಿಸಿದಾಗ ಧೈರ್ಯ, ಆತ್ಮವಿಶ್ವಾಸ ಬಲವನ್ನು ಮತ್ತು ಸಲಹೆ ಸೂಚನೆಗಳನ್ನು ಹಾಗೂ ಮಾರ್ಗದರ್ಶನ ನೀಡುತ್ತಾ, ಇತರ ತರಬೇತಿಯಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡುತ್ತಿದ್ದೀರಿ. ಆದ್ದರಿಂದ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಮತ್ತು ಆರ್ಬಿಟ್ ಸಂಸ್ಥೆಯ ನಿರ್ದೇಶಕರಿಗೆ ಆಪ್ತ ಸಮಾಲೋಚಕರಿಗೆ ನನ್ನ ಹೃದಯ ಅಂತರಾಳದಿಂದ ಧನ್ಯವಾದಗಳು ಸಲ್ಲಿಸಿರುತ್ತಾರೆ.

## “ನವಜೀವನ (ಎಲ್.ಎಲ್.ಎಲ್.ಎಫ್) ಕಾರ್ಯಕ್ರಮ”

### “ಆಪ್ತ ಸಮಾಲೋಚನೆ ಕಾರ್ಯಕ್ರಮ”



24 ಜುಲೈ 2025ರಂದು ಆರ್ಬಿಟ್ ಸಂಸ್ಥೆ ಮತ್ತು ಲಿವ್ ಲವ್ ಲಾಫ್ ಫೌಂಡೇಶನ ಇವರ ಜಂಟಿ ಆಶ್ರಯದಲ್ಲಿ ಗೋಕುಲ್ ಗ್ರಾಮದ ಚಂದ್ರಕಲಾ ಅವರಿಗೆ ಶ್ರೀಮತಿ ರೂಪಾಲಿ ಆಪ್ತ ಸಮಾಲೋಚನೆ ಅಧಿವೇಶನವನ್ನು ನಡೆಸಿದರು. ಮಾನಸಿಕ ಅಸ್ವಸ್ಥರಾಗಿ ಬಳಲುತ್ತಿರುವ ಪ್ರದೀಪ್ ಇವನ ತಾಯಿತು ಮಗನಿಂದ ಅನುಭವಿಸುತ್ತಿರುವ ಮಾನಸಿಕ ಅಸ್ವಸ್ಥತೆಯ ನೋವನ್ನು ಹಂಚಿಕೊಂಡರು. ಬೇರೆ ಯಾರಿಗೂ ಅವನ ನೋವನ್ನು ಕೇಳಲು ಸಮಯದಲ್ಲಿ ಅವನ ನೋವನ್ನು ಕೇಳಲು ಸಾಕಷ್ಟು ಸಮಯವನ್ನು ಆಪ್ತ ಸಮಾಲೋಚರಿಗೆ ನೀಡಿದರು. ಅವರು ತುಂಬಾ ಭಾವುಕರಾಗಿದ್ದರು ಮತ್ತು ಅವನ ನೋವಿನ ಹೊರೆಯನ್ನು ಶ್ರೀಮತಿ ರೂಪಾಲಿ ಆಪ್ತ ಸಮಾಲೋಚರು ತೆಗೆದುಹಾಕಲಾಗಿದೆ ಎಂದು ತಮ್ಮ ಅನುಭವವನ್ನು ಹಂಚಿಕೊಂಡರು.

### “ಆಶಾ ಕಾರ್ಯಕರ್ತರಿಗೆ ಮಾನಸಿಕ ಆರೋಗ್ಯದ ಕುರಿತು ತರಬೇತಿ”



21 ಜುಲೈ 2025 ರಂದು ಆರ್ಬಿಟ್ ಸಂಸ್ಥೆಯ ನವಜೀವನ ಲಿವ್ ಲವ್ ಲಾಫ್ ಕಾರ್ಯಕ್ರಮದ ಕಾರ್ಯಕರ್ತ ಶ್ರೀ ಅರುಣ್ ರವರು. ಬೀದರ್ ತಾಲ್ಲೂಕಿನ ಗೋಡಂಪಲ್ಲಿ ಗ್ರಾಮದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಎಲ್ಲಾ ಆಶಾ ಕಾರ್ಯಕರ್ತರಿಗೆ ಮಾನಸಿಕ ಆರೋಗ್ಯದ ಕುರಿತು ತರಬೇತಿಯನ್ನು ನೀಡಿದರು. ನಮ್ಮ ಆರ್ಬಿಟ್ ಸಂಸ್ಥೆಯು ಸುಮಾರು 31 ವರ್ಷಗಳಿಂದ ನಿರಂತರವಾಗಿ ವಿವಿಧ ಯೋಜನೆಗಳನ್ನು ಮುನ್ನಡೆಸುತ್ತಿದೆ. ಮತ್ತು ಬಡಕುಟುಂಬಗಳಿಗೆ ಬೆಳಕಾಗಿದೆ. ಅಲ್ಲದೆ ಕಳೆದ ಎರಡು ವರ್ಷಗಳಿಂದ ಮಾನಸಿಕ ಕಾಯಿಲೆಗಳಿಗೆ ಸಮುದಾಯ ಆಧಾರಿತ ಪುನರ್ವಸತಿ ಯೋಜನೆಗಳನ್ನು ಜಾರಿಗೆ ತರಲಾಗುತ್ತಿದೆ. ಮಾನಸಿಕ ಅಸ್ವಸ್ಥತೆಗೆ ಸಂಬಂಧಿಸಿದ ಮೂಢನಂಬಿಕೆ ಮತ್ತು ಕಳಂಕವನ್ನು ತೆಗೆದುಹಾಕುವುದು ಮತ್ತು ಜನರಲ್ಲಿ ಜಾಗೃತಿಯನ್ನು ಮೂಡಿಸುವುದು ಮುಖ್ಯ ಉದ್ದೇಶವಾಗಿದೆ. ಕೆಲಸದ ಸ್ಥಳದಲ್ಲಿ ಮಾನಸಿಕ ಅಸ್ವಸ್ಥತೆ ಇರುವವರಿಗೆ ಆದ್ಯತೆ ನೀಡುವುದು ಮುಖ್ಯ ಉದ್ದೇಶವಾಗಿದೆ ಮತ್ತು ನಮ್ಮ ಧ್ಯೇಯವಾಕ್ಯ ವಾಗಿದೆ. ಪ್ರತಿಯೊಂದು ಕೆಲಸವು ವ್ಯಕ್ತಿಯ ಮೇಲೆ ಒತ್ತಡವನ್ನುಂಟು ಮಾಡುತ್ತದೆ. ಅತಿಯಾದ ಕೆಲಸದಿಂದಾಗಿ ಒಬ್ಬ ವ್ಯಕ್ತಿಯು ಆತಂಕ, ಭಯ ಮತ್ತು ಖಿನ್ನತೆಯಂತಹ ಲಕ್ಷಣಗಳನ್ನು ಅನುಭವಿಸುತ್ತಾನೆ. ಈ ಅನಾರೋಗ್ಯವು ಮೆದುಳಿನ ಅಸ್ವಸ್ಥತೆಯಾಗಿದೆ. ಅಂತಹ ಅಸ್ವಸ್ಥತೆ ಕಂಡುಬಂದರೆ ಮನೋವೈದ್ಯರನ್ನು ಸಂಪರ್ಕಿಸಿ ಮತ್ತು ಸರಿಯಾದ ಚಿಕಿತ್ಸೆ ಪಡೆಯಿರಿ. ಅಂತಹ ಕಾಯಿಲೆ ಕಂಡುಬಂದರೆ ಮಾಟಮಂತ್ರ, ಕಳಂಕದಂತಹ ಮೂಢನಂಬಿಕೆಗಳ ಬಗ್ಗೆ ಜಾಗೃತಿ ಮೂಡಿಸಬೇಕು ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಸಿ.ಎಚ್.ಓ ಮತ್ತು ಆಡಳಿತ ವೈದ್ಯಕೀಯ ಅಧಿಕಾರಿ ಸೇರಿದಂತೆ ಒಟ್ಟು 45 ಜನರು ಭಾಗವಹಿಸಿದ್ದರು.

## “ಕ್ಯಾನ್ಸರ್ ಮತ್ತು ಮಾನಸಿಕ ಅಸ್ವಸ್ಥತೆಯ ಬಗ್ಗೆ ಜಾಗೃತಿ ಕಾರ್ಯಕ್ರಮ”



23 ಜುಲೈ 2025ರಂದು ಕಮಲನಗರ ತಾಲ್ಲೂಕಿನ ಬೇಡಕುಂದ ಗ್ರಾಮದಲ್ಲಿ ಆರ್ಬಿಟ್ ಆರ್ಬಿಟ್ ಸಂಸ್ಥೆ ಹುಮನಾಬಾದ್, ನವಜೀವನ ಎಲ್.ಎಲ್.ಎಲ್.ಎಫ್ ಫೌಂಡೇಶನ್ ಕಾರ್ಯಕರ್ತರಾದ ಯೋಹಾನ್ ರವರು ಕ್ಯಾನ್ಸರ್ ಮತ್ತು ಮಾನಸಿಕ ಅಸ್ವಸ್ಥತೆಯ ಬಗ್ಗೆ ಜಾಗೃತಿ ಮೂಡಿಸುತ್ತಿದ್ದಾರೆ. ಜೀವನದಲ್ಲಿ ಸಂಭವಿಸುವ ಕೆಲವು ದುರದೃಷ್ಟಕರ ಘಟನೆಗಳಿಂದಾಗಿ ಒಬ್ಬ ವ್ಯಕ್ತಿಯು ಮಾನಸಿಕ ಅಸ್ವಸ್ಥತೆಗೆ ಬಲಿಯಾಗುತ್ತಾನೆ ಎಂದು ತಿಳಿಸಿದರು. ಈ ಕಾಯಿಲೆಯನ್ನು ಪತ್ತೆಹಚ್ಚಿ ಸೂಕ್ತ ಚಿಕಿತ್ಸೆ ನೀಡಿದರೆ ವ್ಯಕ್ತಿತ್ವ ಸುಧಾರಿಸಬಹುದು. ಕಾರಣವಿಲ್ಲದೆ ಅಳುವುದು, ನಗುವುದು, ಬೀದಿಗಳಲ್ಲಿ ಅಲೆದಾಡುವುದು, ಕೋಪಗೊಳ್ಳುವುದು, ಒಂಟಿತನ, ಏನನ್ನಾದರೂ ಕೇಳುವುದು ಇತ್ಯಾದಿ. ಮಾನಸಿಕ ಅಸ್ವಸ್ಥತೆಯ ಲಕ್ಷಣಗಳು ಆಗಿರುತದತವೆ ಎಂದು ತಿಳಿಸಿದರು. ಹಾಗೆಯೇ ಕ್ಯಾನ್ಸರ್ ಎಂಬುದು ಇಂದಿನ ಸಮಾಜದಲ್ಲಿ ಹೆಚ್ಚು ಸಾಮಾನ್ಯವಾಗುತ್ತಿರುವ ಕಾಯಿಲೆಯಾಗಿದೆ. ಈ ರೋಗದ ಲಕ್ಷಣಗಳು ಕಾಣಿಸಿಕೊಂಡಾಗ, ವೈದ್ಯರಿಂದ ಸಲಹೆ ಪಡೆಯುವುದು ಮತ್ತು ಸರಿಯಾದ ಚಿಕಿತ್ಸೆ ಪಡೆಯುವುದು ಉತ್ತಮ. ಈ ಕ್ಯಾನ್ಸರ್‌ಅನ್ನು ಮೊದಲೇ ಪತ್ತೆಹಚ್ಚಿ ಚಿಕಿತ್ಸೆ ನೀಡಿದರೆ ಗುಣಪಡಿಸಬಹುದು. ಕ್ಯಾನ್ಸರ್‌ಗೆ ಪ್ರಮುಖ ಕಾರಣಗಳು ಧೂಮಪಾನ, ಮದ್ಯಪಾನ, ಗುಟ್ಕಾ, ಬೀಡಿ ಮತ್ತು ಸಿಗರೇಟ್ ಸೇದುವುದು. ವಿಶೇಷವಾಗಿ ಮಹಿಳೆಯರಲ್ಲಿ ಸ್ತನ ಮತ್ತು ಗರ್ಭಾಶಯದ ಕ್ಯಾನ್ಸರ್ ಹೆಚ್ಚಾಗಿ ಕಂಡುಬರುತ್ತದೆ. ದೇಹದಲ್ಲಿ ಯಾವುದೇ ಭಾಗದಲ್ಲಾದರು ಅಸಹಜತೆ ಕಂಡುಬಂದ ತಕ್ಷಣ ವೈದ್ಯರಿಂದ ಸಲಹೆ ಪಡೆಯುವುದು ಮುಖ್ಯ ಎಂದು ತಿಳಿಸಲಾಯಿತು. ಈ ಜಾಗೃತಿ ಕಾರ್ಯಕ್ರಮದಲ್ಲಿ 12 ಜನರು ಭಾಗವಹಿಸಿದ್ದರು.

## “ವನಮಹೋತ್ಸವವನ್ನು ಕಾರ್ಯಕ್ರಮ”




25 ಜುಲೈ 2025ರಂದು ಮುಚಳಂಬ ಗ್ರಾಮದಲ್ಲಿ ಲಿವ್ ಲವ್ ಲಾಫ್ ಕಾರ್ಯಕ್ರಮದಡಿಯಲ್ಲಿ ಮಾನಸಿಕ ಅಸ್ವಸ್ಥರ ಕುಟುಂಬಗಳೊಂದಿಗೆ ವನಮಹೋತ್ಸವವನ್ನು ಕಾರ್ಯಕ್ರಮವನ್ನು ಸಿಸ್ಟರ್ ಕ್ರಿಸ್ಟಿನಾ ಮತ್ತು ಕಾರ್ಯಕರ್ತರಾದ ಶ್ರೀ ಮಹಾದೇವ್ ರವರು ಸಸಿಗಳನ್ನು ವಿತರಿಸುವ ಮೂಲಕ ಆಚರಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಸಿಸ್ಟರ್ ಕ್ರಿಸ್ಟಿನಾ, ಮರಗಳು ಮತ್ತು ಬಳ್ಳಿಗಳು ನಮ್ಮ ಜೀವನಾಡಿಗಳು ಮತ್ತು ಅವುಗಳನ್ನು ರಕ್ಷಿಸುವುದು ನಮ್ಮ ಕರ್ತವ್ಯ ಎಂದು ಹೇಳಿದರು. ನಮ್ಮ ಜೀವನಾಡಿ ಬೆಳೆಯಬೇಕಾದರೆ ನಮ್ಮ ಸುತ್ತಲೂ ಸಸಿಗಳು ಇರಬೇಕು. ಅವರು ಎಲ್ಲರಿಗೂ ವನಮಹೋತ್ಸವದ ಶುಭಾಶಯಗಳನ್ನು ಕೋರಿದರು ಮತ್ತು ಪರಿಸರದ ವಿಶೇಷ ಸಂದರ್ಭವನ್ನು ಗುರುತಿಸಿ ಸಸಿಗಳನ್ನು ವಿತರಿಸಿದರು.

## “ಸಮಾನತೆಯನ್ನು ಉತ್ತೇಜಿಸುವುದು ಮತ್ತು ವಿಶೇಷ ಅಗತ್ಯಗಳು”



01 ಜುಲೈ 2025ರಂದು ಬೀದರ್ ಜಿಲ್ಲೆಯ ಮರಖಲ್ ಗ್ರಾಮದಲ್ಲಿ, ಆರ್ಬಿಟ್ ಸಂಸ್ಥೆಯ ಜಂಟಿ ಆಶ್ರಯ ಮತ್ತು ನವಜೀವನ್ ಲಿವ್ ಲವ್ ಲಾಫ್ ಫೌಂಡೇಶನ್ ಕಾರ್ಯಕ್ರಮದಲ್ಲಿ. ವಿಶೇಷ ವಿಕಲ ಚೇತನರ ಸಂಘದ ಸಭೆಯನ್ನು ಆಯೋಜಿಸಲಾಗಿತ್ತು. ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಆನಂದ್ ರವರು ಈ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು. ಈ ಸಭೆಯ ಮುಖ್ಯ ಉದ್ದೇಶ ಸಮಾನತೆಯನ್ನು ಉತ್ತೇಜಿಸುವುದು ಮತ್ತು ವಿಶೇಷ ಅಗತ್ಯವುಳ್ಳವರು ಸಮಾಜದಲ್ಲಿ ಸಂಪೂರ್ಣವಾಗಿ ಭಾಗವಹಿಸಲು ಸಹಾಯ ಮಾಡುವುದು. ಸಭೆಯಲ್ಲಿ ಚರ್ಚಿಸಲಾದ ಪ್ರಮುಖ ಅಂಶಗಳು: ಯುಡಿಐಡಿ ಕಾರ್ಡ್‌ನಂತಹ ಸಾಮಾಜಿಕ ಭದ್ರತಾ ಯೋಜನೆಗಳು. ಮಾಸಿಕ ಪಿಂಚಣಿ, (ಐಜಿಎನ್‌ಡಿಪಿಎಸ್), ಗ್ರಾಮ ಪಂಚಾಯತ್‌ನಲ್ಲಿ 5% ಅನುದಾನ, ಆರೋಗ್ಯ ಯೋಜನೆಗಳು, ಆರೋಗ್ಯ ರಕ್ಷಣೆ. ದೈನಂದಿನ ಚಟುವಟಿಕೆಗಳ ನಿರ್ವಹಣೆ, ವಕಾಲತ್ತು ಮತ್ತು ಪ್ರಯೋಜನಗಳು. ಈ ವಿಷಯಗಳ ಕುರಿತು ಮಾಹಿತಿಯನ್ನು ನೀಡಲಾಯಿತು. ಆರೋಗ್ಯ ಉಪಕೇಂದ್ರದ ಪಿಎಚ್‌ಸಿ, ಅಂಗನವಾಡಿ ಕೇಂದ್ರದ ಕಾರ್ಯಕರ್ತರು, ಆಶಾ ಕಾರ್ಯಕರ್ತರು ಮತ್ತು ವಿಶೇಷ ಅಗತ್ಯವುಳ್ಳವರು ಸೇರಿದಂತೆ ಒಟ್ಟು 12 ಜನರು ಈ ಸಭೆಯಲ್ಲಿ ಭಾಗವಹಿಸಿದ್ದರು.

## “ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರ”



ಜುಲೈ 4 2025ರಂದು ಔರಾದ್ ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ (DMHP) ಅಡಿಯಲ್ಲಿ ಆರೋಗ್ಯ ಶಿಬಿರವನ್ನು ನಡೆಸಲಾಯಿತು. ಈ ಶಿಬಿರದಲ್ಲಿ ಮನೋವೈದ್ಯರು ಫಲಾನುಭವಿಗಳಿಗೆ ವೈಯಕ್ತಿಕ ಸಮಾಲೋಚನೆ ನೀಡಿ ಅವರ ಅಭಿವೃದ್ಧಿಗಾಗಿ ಮಾತ್ರೆಗಳನ್ನು ವಿತರಿಸಿದರು. ಈ ಸಂದರ್ಭದಲ್ಲಿ ಆರ್ಬಿಟ್ ಸಂಸ್ಥೆ ನವಜೀವನ ಲಿವ್ ಲವ್ ಲಾಫ್ ಕಾರ್ಯಕ್ರಮದ ಕಾರ್ಯಕರ್ತರು ಮನೋವೈದ್ಯರೊಂದಿಗೆ ಸಹಕರಿಸಿದರು. ಗುರುತಿಸಲಾದ ಅನೇಕ ಮಾನಸಿಕ ಅಸ್ವಸ್ಥರಿಗೆ ಚಿಕಿತ್ಸೆ ನೀಡಿ ಅವರಿಗೆ ಸಹಾಯ ಹಸ್ತ ನೀಡಿದರು. ಅವರನ್ನು ಒಟ್ಟುಗೂಡಿಸಿ ಅವರ ಆರೋಗ್ಯ ಮತ್ತು ದೈನಂದಿನ ಚಟುವಟಿಕೆಗಳ ಬಗ್ಗೆ ತಿಳಿಸಲಾಯಿತು.

## “ಮಾನಸಿಕ ಅಸ್ವಸ್ಥರ ಜಾಗೃತಿ ಕಾರ್ಯಕ್ರಮ”



ಬೀದರ್ ತಾಲ್ಲೂಕಿನ ಅಲ್ಲಮ ಪ್ರಭುನಗರದಲ್ಲಿ 05 ಜುಲೈ 2025ರಂದು ಮಾನಸಿಕ ಅಸ್ವಸ್ಥರಿಗಾಗಿ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಆರ್ಬಿಟ್ ಸಂಸ್ಥೆ ಹುಮನಾಬಾದ ಮತ್ತು ಲಿವ್ ಲವ್ ಲಾಫ್ ಫೌಂಡೇಶನ್ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ನೋಹನ್ ರವರು ಮಾನಸಿಕ ಅಸ್ವಸ್ಥರ ಬಗ್ಗೆ ಮಾತನಾಡಿದರು. ಮಾನಸಿಕ ಅಸ್ವಸ್ಥರು ಒಂದು ಮೆದುಳಿನ ಕಾಯಿಲೆಯಾಗಿದ್ದು. ಇತ್ತೀಚಿನ ದಿನಗಳಲ್ಲಿ ಅನೇಕ ಜನರು ಈ ಕಾಯಿಲೆಯಿಂದ ಬಳಲುತ್ತಿದ್ದಾರೆ. ಆತಂಕ ಕೆಲಸದ ಒತ್ತಡದಿಂದಾಗಿ ಜನರು ಮಾನಸಿಕ ಅಸ್ವಸ್ಥರಾಗುತ್ತಿದ್ದಾರೆ. ತಮ್ಮಷ್ಟಕ್ಕೆ ತಾವೇ ಮಾತನಾಡುವುದು, ನಗುವುದು, ಅಳುವುದು, ನಿದ್ರಾಹೀನತೆ, ಒಂಟಿತನ, ನಿರಾಸಕ್ತಿ, ಖಿನ್ನತೆ, ಕೋಪ, ಜಗಳ ಮುಂತಾದವು ಮಾನಸಿಕ ಅಸ್ವಸ್ಥರಲ್ಲಿ ಕಂಡುಬರುವ ಲಕ್ಷಣಗಳಾಗಿವೆ. ಅಂತಹ ಲಕ್ಷಣಗಳು ಇರುವವರು ಯಾರಾದರೂ ಕಂಡುಬಂದರೆ ನಮಗೆ ತಿಳಿಸಬೇಕು. ನಾವು ಅವರನ್ನು ಭೇಟಿ ಮಾಡುತ್ತೇವೆ ಮತ್ತು ಸರ್ಕಾರವು ಉಚಿತ ತಪಾಸಣೆ ಮತ್ತು ಉಚಿತ ಚಿಕಿತ್ಸೆಯನ್ನು ನೀಡುತ್ತದೆ ಎಂದು ಜನರಿಗೆ ಅರಿವು ಮೂಡಿಸಲಾಯಿತು. ಮಾನಸಿಕ ಅಸ್ವಸ್ಥರಿಗಾಗಿ ನಡೆದ ಈ ಜಾಗೃತಿ ಕಾರ್ಯಕ್ರಮದಲ್ಲಿ ಸಿ.ಎಚ್.ಓ ಆಶಾ ಕಾರ್ಯಕರ್ತರು ಮತ್ತು ಇತರರು ಸೇರಿದಂತೆ ಒಟ್ಟು 12 ಜನರು ಭಾಗವಹಿಸಿದ್ದರು.

## “ನಿರಂತರ ಚಿಕಿತ್ಸೆ ಮಾತ್ರಗಳು ನೀಡುವ ಮೂಲಕ ಮಾನಸಿಕ ಅಸ್ವಸ್ಥತೆಯಿಂದ ಬದಲಾವಣೆ”




17 ಜುಲೈ 2025ರಂದು ಬೀದರ್ ತಾಲ್ಲೂಕಿನ ಗುಡುಪಲ್ಲಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹುಮನಾಬಾದ ಮತ್ತು ನವಜೀವನ ಎಲ್.ಎಲ್.ಎಲ್.ಎಫ್ ಸಂಯುಕ್ತ ಆಶ್ರಯದಲ್ಲಿ ಕಾರ್ಯಕರ್ತೆಯಾದ ಶ್ರೀಮತಿ ದೀಪಿಕಾ ಅವರು ನಿರಂತರ ಚಿಕಿತ್ಸೆ ನೀಡುವ ಮೂಲಕ ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿರುವ ವ್ಯಕ್ತಿಯನ್ನು ಗುಣಪಡಿಸಬಹುದು ಎಂಬುದರ ಕುರಿತು ಮಾತನಾಡಿದರು. ನಾವು ಪ್ರತಿ ಮಂಗಳವಾರ ಬಸವಕಲ್ಯಾಣ ತಾಲ್ಲೂಕು ಆಸ್ಪತ್ರೆಯಲ್ಲಿ ಶಿಬಿರವನ್ನು ನಡೆಸುತ್ತೇವೆ. ಮಾನಸಿಕ ಅಸ್ವಸ್ಥರಿಗೆ ಉಚಿತ ತಪಾಸಣೆಗಳನ್ನು ನಡೆಸುತ್ತೇವೆ. ಅವರು ಮಾತ್ರೆಗಳನ್ನು ಸರಿಯಾಗಿ ತೆಗೆದುಕೊಳ್ಳುತ್ತಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸಲು ನಾವು ಪ್ರತಿ ತಿಂಗಳು ಅವರ ಮನೆಗಳಿಗೆ ಭೇಟಿ ನೀಡುತ್ತೇವೆ. ಮತ್ತು ಅದಕ್ಕೆ ಅನುಗುಣವಾಗಿ ಅವರ ಪೋಷಕರಿಗೆ ತಿಳಿಸುತ್ತೇವೆ. ಅವರು ಮಾತ್ರೆಗಳನ್ನು ತೆಗೆದುಕೊಳ್ಳದಿದ್ದರೆ ಅವರ ಪೋಷಕರು ಅವರಿಗೆ ರಹಸ್ಯವಾಗಿ ಮಾತ್ರೆಗಳನ್ನು ನೀಡುವಂತೆ ವಿನಂತಿಸುತ್ತೇನೆ. ಅಂದರೆ ಅವರ ಊಟ ಅಥವಾ ಚಹಾ ಅಥವಾ ಅವರ ಯಾವುದೆ ತಿಂಡಿಗಳಲ್ಲಿ ಹಾಕಿ ಪಾತ್ರ ಸೇವಿಸುವಂತೆ ನೊಡಿಕೊಳ್ಳಬೇಕು. ಏಕೆಂದರೆ ನಮ್ಮ ಆರ್ಬಿಟ್ ಸಂಸ್ಥೆಯ ಮುಖ್ಯ ಗುರಿ ಅವರು ನಿಮ್ಮಂತೆ ಮತ್ತು ನನ್ನಂತೆ ಸಮಾಜದಲ್ಲಿ ಸಂತೋಷದ ಜೀವನವನ್ನು ನಡೆಸಬೇಕು. ಹೀಗೆ ಮಾಡುವುದರಿಂದ ಅವರು ತಮ್ಮ ದೈನಂದಿನ ಕಾಯಿಲೆಯಿಂದ ಹೊರಬರಬಹುದು ಎಂದು ಜನರಿಗೆ ತಿಳಿಸಿದರು. ಮನೋವೈದ್ಯರು ಮತ್ತು ಗ್ರಾಮಸ್ಥರು ಸೇರಿದಂತೆ ಒಟ್ಟು 15 ಜನರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಈ ಕಾರ್ಯಕ್ರಮದ ಪ್ರಯೋಜನವನ್ನು ಪಡೆದರು.

## “ಸಂಘದ ಮಹೀಳೆಯರಿಗೆ ಅಂಗನವಾಡಿ ಕೇಂದ್ರದಲ್ಲಿ ಮಾನಸಿಕ ಅಸ್ವಸ್ಥತೆಯ ಕುರಿತು ಜಾಗೃತಿ”



11 ಜುಲೈ 2025ರಂದು ಹಲಸೂರು ತಾಲೂಕಿನ ಹಾಲಹಳ್ಳಿ ಗ್ರಾಮದ ಸಂಘದ ಮಹೀಳೆಯರಿಗೆ ಅಂಗನವಾಡಿ ಕೇಂದ್ರದಲ್ಲಿ ಒಟ್ಟುಗೂಡಿಸಿ ಮಾನಸಿಕ ಅಸ್ವಸ್ಥತೆಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿಆರ್ಬಿಟ್ ಸಂಸ್ಥೆಯ ನವಜೀವನ ಲಿವ್ ಲವ್ ಲಾಫ್ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಲಕ್ಷ್ಮಿ ರವರು ಮಾತನಾಡಿದರು. ಆರ್ಬಿಟ್ ಸಂಸ್ಥೆ ಒಂದು ಸಾಮಾಜಿಕ ಸೇವಾ ಸಂಸ್ಥೆಯಾಗಿದೆ. ಅನೇಕ ಸಾಮಾಜಿಕ ಸೇವಾ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಮಹಿಳಾ ಅಭಿವೃದ್ಧಿ ಯೋಜನೆ, ಸಮೃದ್ಧಿ ಯೋಜನೆ, ಶಿಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಮುಂತಾದವುಗಳು ವಳಗೊಂಡಿದೆ. ಕಳೆದ ಎರಡು ವರ್ಷಗಳಿಂದ ಆರ್ಬಿಟ್ ಸಂಸ್ಥೆಯು ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ ಸಮನ್ವಯದೊಂದಿಗೆ 3000 ಕ್ಕೂ ಹೆಚ್ಚು ಮಾನಸಿಕ ಅಸ್ವಸ್ಥರು ಪತ್ತೆಹಚ್ಚಿ ಅವರನ್ನು ಪೂನರ್ವಸತಿಗೆ ತರುವ ಕಾರ್ಯವನ್ನು ಮಾಡುತಿದೆ. ಮತ್ತು ಅವರ ಪೋಷಕರಿಗೆ ಚಿಕಿತ್ಸೆಯ ಮೂಲಕ ಸುಧಾರಿಸುವುದರ ಬಗ್ಗೆ ತಿಳಿಸಿ ಅವರಿಗೆ ಸರಕಾರದ ಸವಲತ್ತುಗಳನ್ನು ವದಗಿಸಿಕೊಡುವುದರಲ್ಲಿ ಕೆಲಸ ಮಾಡುತ್ತಿದೆ. ಮಾನಸಿಕ ಅಸ್ವಸ್ಥರನ್ನು ಗುರುತಿಸಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಪ್ರಯತ್ನಿಸುತ್ತಿದೆ ಎಂದು ತೀಳಿಸಿದರು. ಯಾರಾದರೂ ನಿಮ್ಮ ಊರಿನಲ್ಲಿ ಅಕ್ಕ-ಪಕ್ಕದಲ್ಲಿ ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿದ್ದರೆ ಅವರಿಗೆ ತಿಳಿಸಬೇಕೆಂದು ಅವರಿಗೆ ಮನವರಿಕೆ ಮಾಡಿದರು. ಮತ್ತು ನಮ್ಮ ಸಹಾಯವಾಣಿ ಸಂಖ್ಯೆ 9036664271 ಗೆ ಕರೆ ಮಾಡಿ ತಿಳಿಸಿ ಸಹಕರಿಸಿ ಎಂದು ಕೇಳಲಾಯಿತು. ಈ ಜಾಗೃತಿ ಕಾರ್ಯಕ್ರಮದಲ್ಲಿ 40 ಜನರು ಸಂಘದ ಮಹೀಳೆಯರು ಭಾಗವಹಿಸಿ ಸದುಪಯೋಗವನ್ನು ಪಡೆದುಕೊಂಡರು.

## “ಕರಪತ್ರವನ್ನು ನೀಡುವುದರ ಮೂಲಕ ಜಾಗೃತಿ ಕಾರ್ಯಕ್ರವ”



ಬೀದರ್ ತಾಲೂಕಿನ ಮನ್ನಳ್ಳಿ ಗ್ರಾಮದ ಅರಕ್ಷಕ ಪೊಲೀಸ್ ಠಾಣೆಯಲ್ಲಿ ಆರ್ಬಿಟ್ ಸಂಸ್ಥೆ ಹುಮನಾಬಾದ್ ಹಾಗು ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಸಂಯುಕ್ತಾ ಆಶ್ರಯದಲ್ಲಿ ಪೊಲೀಸ್ ಠಾಣೆಯ ಅಧಿಕಾರಿಗಳಿಗೆ ಭೇಟಿ ನೀಡಿ ಕರಪತ್ರವನ್ನು ನೀಡುವುದರ ಮೂಲಕ ಜಾಗೃತಿ ಕಾರ್ಯಕ್ರಮವನ್ನು ಮಾಡಲಾಯಿತ್ತು. ಈ ಕಾರ್ಯಕ್ರಮದಲ್ಲಿ ತಮ್ಮ ಕೆಲಸದ ಸಮಯದಲ್ಲಿ ತಮ್ಮ ಮೇಲೆ ಬೀಳುವ ಒತ್ತಡವನ್ನು ಹೇಗೆ ನಿರ್ವಹಿಸುವುದು. ದೈನಂದಿನ ಚಟುವಟಿಕೆಗಳಲ್ಲಿ ದೈಹಿಕವಾಗಿ ಮತ್ತು ಮಾನಸಿಕವಾಗಿ ತಮ್ಮನ್ನು ಹೇಗೆ ನೋಡಿಕೊಳ್ಳುವುದು. ಮತ್ತು ಅವರ ಮಾನಸಿಕ ಅಸ್ವಸ್ಥರನ್ನು ಹೇಗೆ ಕಾಪಾಡಿಕೊಳ್ಳುವುದು ಎಂಬುದರ ಕುರಿತು ಅವರಿಗೆ ತಿಳಿಸಲಾಯಿತು. ಪ್ರತಿಯೊಬ್ಬ ಅಧಿಕಾರಿಗೆ ಅವರ ಕೆಲಸದ ಪ್ರದೇಶದಲ್ಲಿ ಕರಪತ್ರಗಳನ್ನು ವಿತರಿಸಬೇಕೆಂದು ವಿನಂತಿಸಲಾಯಿತು. ಅಧಿಕಾರಿಗಳು ನಮ್ಮ ಸೇವೆಯನ್ನು ಕಂಡು ಮತ್ತು ಪೊಲೀಸರ ಬಗ್ಗೆ ಅವರು ಹೊಂದಿರುವ ಕಾಳಜಿಯನ್ನು ಶ್ಲಾಘನಿಯವಾಗಿದೆ ಎಂದು ಅಭಿನಂದಿಸಿದರು.

## “ಆರೈಕೆದಾರರ ಸಭೆ”



ಜುಲೈ 23 2025ರಂದು ಭಾಲ್ಕಿ ತಾಲ್ಲೂಕಿನ ಕಾಸರತುಗಾಂವ್ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹುಮನಾಬಾದ್ ಮತ್ತು ಲಿವ್ ಲವ್ ಲಾಫ್ ಫೌಂಡೇಶನ್ ಇವರ ಜಂಟಿ ಆಶ್ರಯದಲ್ಲಿ ಆರೈಕೆದಾರರ ಸಭೆಯನ್ನು ನಡೆಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಕಾರ್ಯಕರ್ತ ಶ್ರೀ ಪ್ರದೀಪ್ ವಹಿಸಿದ್ದರು. ಸಭೆಯಲ್ಲಿ ಹಾಜರಿದ್ದ ಪೋಷಕರನ್ನು ಉದ್ದೇಶಿಸಿ ಮಾತನಾಡಿದರು. ಮಾನಸಿಕ ಅಸ್ವಸ್ಥರ ದೈನಂದಿನ ಚಟುವಟಿಕೆಗಳು, ಅವರ ಆರೋಗ್ಯ ಮತ್ತು ನಿರಂತರ ಚಿಕಿತ್ಸೆಯಲ್ಲಿ ಕುಟುಂಬದ ಪಾತ್ರ ಮತ್ತು ಸಾಕಷ್ಟು ಔಷಧಿ ಸಿಗದ ಸಂದರ್ಭಗಳಲ್ಲಿ ಸಭೆಯ ಸದಸ್ಯರು ಸಾಮೂಹಿಕವಾಗಿ ಅವರ ಹಕ್ಕುಗಳಿಗಾಗಿ ಹೇಗೆ ವಕಾಲತ್ತು ವಹಿಸಬಹುದು ಎಂಬುದರ ಕುರಿತು ಚರ್ಚಿಸಿದರು. ಒಟ್ಟು 8 ಪೋಷಕರು ಸಭೆಯ ಪ್ರಯೋಜನವನ್ನು ಪಡೆದರು.

## “ಮನೆಗಳ ಸಮೀಕ್ಷೆ  ಮಾನಸಿಕ ಅಸ್ವಸ್ಥರನ್ನು ಪತ್ತೆ”



ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಪೀಟರ್ ರವರು ಜುಲೈ ತಿಂಗಳಿನಲ್ಲಿ ಎಲ್.ಎಲ್ಎಲ್.ಎಲ್.ಎಫ್ ಸಂಯುಕ್ತಾಶ್ರಯದಲ್ಲಿ 300 ಮನೆಗಳ ಸಮೀಕ್ಷೆಯನ್ನು ನಡೆಸಿದರು. ಸುಮಾರು 12 ಜನ ಮಾನಸಿಕ ಅಸ್ವಸ್ಥರನ್ನು ಈ ಸಮೀಕ್ಷೆಯಲ್ಲಿ ಗುರುತಿಸಿದರು. ಅವರಿಗೆ ಉಚಿತ ಚಿಕಿತ್ಸೆಯ ಬಗ್ಗೆ ಹಾಗೂ ಮನೋವೈಧ್ಯರ ಬಗ್ಗೆ ಅರಿವು ಮೂಡಿಸಿದರು. ಅವರ ಸಮೀಕ್ಷೆಯ ಸಮಯದಲ್ಲಿ ಮನೆಮನೆಗೆ ಹೋಗಿ ಮಾನಸಿಕ ಅಸ್ವಸ್ಥರ ಚಿಕಿತ್ಸೆಯ ಬಗ್ಗೆ ಮಾಹಿತಿ ನೀಡಿದರು. ಈ ಸಮೀಕ್ಷೆಯಲ್ಲಿ ಅನೇಕ ವಿಶೇಷ ಅಗತ್ಯತೆಗಳು ಕಂಡುಬಂದರೂ ನಮ್ಮ ಆರ್ಬಿಟ್ ಸಂಸ್ಥೆಯು ಒದಗಿಸುವ ಸೌಲಭ್ಯಗಳು ಮತ್ತು ಸರ್ಕಾರವು ಅವರಿಗೆ ಒದಗಿಸಬೇಕಾದ ಸೌಲಭ್ಯಗಳ ಬಗ್ಗೆಯೂ ಅವರಿಗೆ ತಿಳಿಸಲಾಯಿತು. ಇದರಲ್ಲಿ ಆಶಾ ಕಾರ್ಯಕರ್ತರು ಮನೆಗಳ ಸಮೀಕ್ಷೆಯನ್ನು ಮಾಡಲು ಸಹಕರಿಸಿದ್ದಾರೆ.

## “ದಣಿದ ಜೀವಕ್ಕೆ ಆಪ್ತಸಮಾಲೋಚನೆ”



ಬಾದಲ್‌ಗಾಂವ್ ಗ್ರಾಮದ ನಿವಾಸಿಯಾಗಿರುವ ಶ್ರೀಮತಿ ಲಲಿತಾ ಸುಮಾರು 10 ವರ್ಷಗಳಿಂದ ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿದ್ದರು. ಮಹಾರಾಷ್ಟದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಅವರನ್ನು ಔರಾದ್ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಮನವೊಲಿಸಲಾಯಿತು. ಅವರ ಗಂಡನಾದ ಜೀವನ್ ರವರು ಒಬ್ಬಂಟಿಯಾಗಿ ಕೆಲಸ ಮಾಡಿ ಜೀವನ ನಡೆಸಬೇಕಾಗಿತ್ತು. ಆದುದರಿಂದ ಜೀವನರವರು ತನ್ನ ಹೆಂಡತಿಯಾದ ಲಲಿತಾಳು ಕಳೆದ ದಿನಗಳಿಂದ ಮಾತ್ರೆಗಳನ್ನು ಸರಿಯಾಗಿ ತೆಗೆದುಕೊಳ್ಳುತ್ತಿಲ್ಲ ಮತ್ತು ಮಾತ್ರೆಗಳನ್ನು ನೀಡಿದರೆ ವಾಂತಿ ಮಾಡಲು ಪ್ರಾರಂಭಿಸುತ್ತಿದ್ದಾರೆ ಎಣದು ತಿಳಿಸಿದರು. ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಸಂಯೋಜಕರಾದ ಶ್ರೀ ರಫೀಕ್ ರವರು ಜುಲೈ 19 2025ರಂದು ಅವರ ಮನೆಗೆ ಭೇಟಿ ನೀಡಿ ಜೀವನ್ ಲಲಿತಾ ಅವರಿಗೆ ಆಪ್ತಸಮಾಲೋಚನೆ ನೀಡಿದರು. ಪುನಾ: ಪಾತ್ರಗಳನ್ನು ಸೇವಿಸುವುದರಿಂದ ಲಲಿತಾರವರು ಅತಿಹೆಚ್ಚಾಗಿ ಚೇತರಿಸಿಕೊಂಡಿದ್ದಾ. ದಣಿದ ಜೀವಕ್ಕೆ ಪುನ: ಮಾತ್ರೆಗಳನ್ನು ನೀಡುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ತಿಳಿದು ಆರ್ಬಿಟ್ ಸಂಸ್ಥೆಗೆ ಧನ್ಯವಾದಗಲನ್ನು ಸಲ್ಲಿಸಿದ್ದರು.

## “ಮಾನಸಿಕ ಅಸ್ವಸ್ಥತೆಯ ಫಲಾನುಭವಿಗಳಿಗೆ ಸರಕಾರಿ ಸವಲತ್ತು”



23 ಜುಲೈ 2025ರಂದು ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಕುಮಾರ್ ಅವರು ಭಾಲ್ಕಿ ತಾಲ್ಲೂಕಿನ ಜೋಳದಪಗಾ ಗ್ರಾಮದಲ್ಲಿ ಮಾನಸಿಕ ಅಸ್ವಸ್ಥತೆಯ ಫಲಾನುಭವಿಗಳಿಗೆ ಆರೋಗ್ಯ ಕಾರ್ಡ್, ಇ-ಶ್ರಮ ಕಾರ್ಡ್ ಮತ್ತು ಪಿಂಚಣಿಯನ್ನು ವಿತರಿಸಿದರು. ಯಾರೂ ಅವರಿಗೆ ಕೆಲಸ ನೀಡಲು ಸಾಧ್ಯವಾಗದಿದ್ದಾಗ, ಆರ್ಬಿಟ್ ಸಂಸ್ಥೆಯು ನಮ್ಮ ಜೀವನೋಪಾಯಕ್ಕೆ ಉಪಯುಕ್ತವಾದ ಪಿಂಚಣಿ ವ್ಯವಸ್ಥೆಯನ್ನು ಒದಗಿಸಿತು. ಮತ್ತು ಪ್ರತಿ ಹಂತದಲ್ಲೂ ನಮಗೆ ಮಾರ್ಗದರ್ಶನ ನೀಡಿತು. ನಾವು ಅವರಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತೇವೆ ಮತ್ತು ನಮ್ಮ ಹೃತ್ಪೂರ್ವಕ ಭಾವನೆಗಳನ್ನು ಹಂಚಿಕೊಳ್ಳುತ್ತೇವೆ ಎಂದು ತಮ್ಮ ಅಭಿಪ್ರಾಯಗಳನ್ನು ವೆಕ್ತಪಡಿಸಿದರು.

## “ತಾಲೂಕು ಸರ್ಕಾರಿ ಆಸ್ಪತ್ರೆಯಲ್ಲಿ ಆರೋಗ್ಯ ಶಿಬಿರ”



ಜುಲೈ 14 2025ರಂದು ಬಸವಕಲ್ಯಾಣ ತಾಲೂಕು ಸರ್ಕಾರಿ ಆಸ್ಪತ್ರೆಯಲ್ಲಿ ಆರೋಗ್ಯ ಶಿಬಿರ (DMHP) ನಡೆಯಿತು. ಈ ಶಿಬಿರದಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರು ಮನೋವೈದ್ಯರೊಂದಿಗೆ ಸಹಕರಿಸಿ ಮಾನಸಿಕ ಅಸ್ವಸ್ಥರಿಗೆ ಚಿಕಿತ್ಸೆ ನೀಡಿದರು. ಅವರ ಅಗತ್ಯಗಳಿಗೆ ಅನುಗುಣವಾಗಿ ಕಾರ್ಡ್‌ಗಳನ್ನು ಸೆಳೆಯಲು ಅವರು ಸಹಾಯ ಮಾಡಿದರು. ಮತ್ತು ಅದರೊಂದಿಗೆ ಅವರಿಗೆ ಸೂಕ್ತ ಮಾರ್ಗದರ್ಶನ ನೀಡಲಾಯಿತು. ಗುರುತಿಸಲಾದ ಅನೇಕ ಮಾನಸಿಕ ಅಸ್ವಸ್ಥರಿಗೆ ಚಿಕಿತ್ಸೆ ನೀಡಲಾಗಿದೆ ಎಂದು ಖಚಿತಪಡಿಸಲಾಯಿತು. ವೈದ್ಯಕೀಯ ಅಧಿಕಾರಿಗಳು ಮತ್ತು ಇತರರು ತಮ್ಮ ಸೇವೆಯ ಮೂಲಕ ಈ ಸರ್ಕಾರಿ ಕೆಲಸದಲ್ಲಿ ಅವರ ಸಹಕಾರಕ್ಕಾಗಿ ಕೃತಜ್ಞತೆಯನ್ನು ವ್ಯಕ್ತಪಡಿಸಿದ್ದಾರೆ.

# ಸೇವಾ ಸಂಗಮ ಸಂಸ್ಥೆ, ಕಲಬುರಗಿ

## “ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಅರಿವು ಕಾರ್ಯಕ್ರಮ”



ಜುಲೈ 18 2025ರಂದು ಕಲಬುರಗಿ ಜಿಲ್ಲೆಯ ಹೂನ್ನಕಿರಣಗಿ ಗ್ರಾಮದಲ್ಲಿ ಬರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೇವಾಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮ್ ಜೀ ಫೌಂಡೇಶನ ಇವರ ಸಂಯುಕ್ತ ಆಶ್ರಯದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ತರಬೇತಿಯ ಕುರಿತು 5ನೇ ಮತ್ತು 6ನೇ ತರಗತಿಯ ವಿದ್ಯಾರ್ಥಿಗಳಿಗೆ ಬೆಳವಣಿಗೆಯಲ್ಲಿ ಕುಂಠಿತ ಇರುವ ಮಕ್ಕಳು ಯಾವಯಾವ ರೀತಿಯಾಗಿ ಇರುವರು ಎಂದರೆ ಮಗು ಹುಟ್ಟಿದ ತಕ್ಷಣ ಅಳಬೇಕು ಇಲ್ಲವಾದರೆ ಮಗುವಿನ ಬೆಳವಣಿಗೆಯಲ್ಲಿ ಕುಂಠಿತಗೊಳ್ಳುವುದು. ಮೂರು ತಿಂಗಳಲ್ಲಿ ಮಗುವಿನ ಕತ್ತು ನಿಲ್ಲಬೇಕು. 9 ತಿಂಗಳಿಗೆ ಮಗು ಕುಳಿತುಕೊಳಬೇಕು ಮತ್ತು ಅಂಬೆಗಾಲು ಹಾಕಬೇಕು 1 ವರ್ಷದಲ್ಲಿ ಮಗುವು ಯಾರ ಸಹಾಯವಿಲ್ಲದೆ ನಡೆಯುವುದನ್ನು ಕಲಿಯಬೇಕು. 2 ವರ್ಷದಲ್ಲಿ ಮಗುವು ಸಂಪೂರ್ಣವಾಗಿ ಮನೆಯವರ ಹೆಸರುಗಳನ್ನು ಹೇಳಬೇಕು ಮತ್ತು ಮನೆಯ ವಾತವರಣಕೆ ಮಗು ಹೊಂದಿಕೊಳ್ಳಬೇಕು. 6 ವರ್ಷದಲ್ಲಿ ಶಾಲೆಗೆ ಹೋಗಿ ಅಕ್ಷರ ಕಲಿಯಬೇಕು ಮಗುವು ಸಾಮಾಜಿಕ ಎಲ್ಲಾರ ಜೋತೆಗೆ ಬೆರೆಯಬೇಕು. ಈ ಎಲ್ಲಾ ಮೇಲಿನ ಅಂಶಗಳು ಒಂದು ವೇಳೆ ಮಗುವಿನಲ್ಲಿ ಕಂಡು ಬಾರದೆ ಹೋದರೆ ಮಗುವಿನ ಬೆಳವಣಿಗೆಯ ಹಂತಗಳಲ್ಲಿ ಮಗುವು ಕುಂಠಿತ ಹೋಂದಿದೆ ಎಂದು ತಿಳಿಯಬೇಕು ಎಂದು ಸೇವಾಸಂಘಮ ಸಂಸ್ಥೆಯ ಕಾರ್ಯಕರ್ತೆ ಶ್ರೀಮತಿ ದಾಕ್ಷಯಣಿಯವರು ಒಟ್ಟು 50 ವಿದ್ಯಾರ್ಥಿಗಳಿಗೆ ಮಾಹಿತಿ ತಿಳಿಸಿದರು.

## “ಕ್ಯಾನ್ಸರ್ ಅರಿವಿನ ಕಾರ್ಯಕ್ರಮ”



04 ಜುಲೈ 2025ರಂದು ಕಲಬುರಗಿ ನಗರ ಪ್ರದೇಶದ ಸೇಂಟ ಮೇರಿ ಸಭಾಂಗಣದಲ್ಲಿ ಸೇವಾಸಂಗಮ ಸಂಸ್ಥೆ, ಕಲಬುರಗಿ ಇವರ ವತಿಯಿಂದ ಕಲಬುರಗಿ ನಗರಪ್ರದೇಶದ ಅಂಗನವಾಡಿ ಕಾರ್ಯಕರ್ತೆಯರಿಗೆ ಕ್ಯಾನ್ಸರ್ ರೋಗದ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಶ್ರೀ ರಾಜಕುಮಾರ ಕಾರ್ಯಕರ್ತರು ಸೇವಾಸಗಮ ಸಂಸ್ಥೆ, ಕಲಬುರಗಿ ಇವರು ಮಾತನಾಡಿ ಕ್ಯಾನ್ಸರ್ ಎಂದರೇನು? ಕ್ಯಾನ್ಸರನ ಲಕ್ಷಣಗಳು, ಕ್ಯಾನ್ಸರ್ನ ವಿಧಗಳು, ಕ್ಯಾನ್ಸರನ ಹಂತಗಳು ಹಾಗೂ ಕ್ಯಾನ್ಸಗೆ ಲಭ್ಯವಿರುವ ಚಿಕಿತ್ಸೆಗಳ ಕುರಿತು ಮಾಹಿತಿಯನ್ನು ನೀಡಿದರು. ಈ ಕಾರ್ಯಕ್ರಮದಲ್ಲಿ 65 ಅಂಗನವಾಡಿ ಕಾರ್ಯಕರ್ತೆಯರು ಭಾಗವಹಿಸಿದರು.

## “ಸಾಧನ ಸಲಕರಣೆಗಳ ವಿತರಣೆಯ ಕಾರ್ಯಕ್ರಮ”



ಜುಲೈ 05 ರಂದು ಕಲಬುರಗಿ ನಗರಪ್ರದೇಶದ ಮದರ್ ತೆರೇಸಾ ಸಭಾಂಗಣದಲ್ಲಿ ಸೇವಾಸಂಗಮ ಸಂಸ್ಥೆ ಕಲಬುರಗಿ, ಅಜೀಂ ಪ್ರೇಮಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಅಡಿಯಲ್ಲಿ ರೈಸ್ಬ್ಯೋಯಾನಿಕ್ಸ ಸಂಸ್ಥೆ, ಬೆಂಗಳೂರು ಇವರ ವತಿಯಿಂದ 49 ಮಕ್ಕಳಿಗೆ ಸಾಧನ ಸಲಕರಣೆಗಳ ವಿತರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತ್ತು. ಕಾರ್ಯಕ್ರಮದ ದಿವ್ಯ ಸಾನಿಧ್ಯ ಮತ್ತು ಅಧ್ಯಕ್ಷತೆಯನ್ನು ಪರಮ ಪೂಜ್ಯ ಬಿಷಪ್ ರಾರ್ಬಟ್ ಮೈಕಲ್ ಮೇರಾಂದ ಧರ್ಮಾಧ್ಯಕ್ಷರು ಹಾಗೂ ಸೇವಾಸಂಗಮ ಸಂಸ್ಥೆ ಕಲಬುರಗಿ ಇವರು ವಹಿಸಿಕೊಂಡಿದರು. ಇವರು ಸಲಕರಣೆಗಳನ್ನು ವಿತರಣೆಮಾಡಿ “ಕಾಯಕವೇ ಕೈಲಾಶ ಕರ್ತವ್ಯವೇ ಪರಮೋದ್ದೇಶ" ಎಂಬ ಮಾತಿನಂತೆ ಸೇವಾಸಂಗಮ ಸಂಸ್ಥೆ ಸಮಾಜದ ಅಭಿವೃದ್ಧಿಯ ಕಾರ್ಯಗಳನ್ನು ಮಾಡುತ್ತಿದೆ ಎಂದು ಹೇಳಿದರು. ಇದೆ ಸಂದರ್ಭದಲ್ಲಿ ಸೇವಾಸಂಗಮ ಸಂಸ್ಥೆ ವತಿಯಿಂದ ರೈಸ್ಬ್ಯೋಯಾನಿಕ್ಸ ಸಂಸ್ಥೆ ಬೆಂಗಳೂರು ಈ ತಂಡದ ಸದಸ್ಯರಿಗೆ ಶಾಲು ಹೊದಿಸುವ ಮೂಲಕ ಸನ್ಮಾನಿಸಿ ಗೌರವಿಸಿದರು. ಕಾರ್ಯಕ್ರಮದಲ್ಲಿ ಶ್ರೀ ಸನಿರಾಮ ರೈಸ್ಬ್ಯೋಯಾನಿಕ್ಸ ಸಂಸ್ಥೆ ಬೆಂಗಳೂರು ಇವರು ಮಾತನಾಡಿ ಸೇವಾಸಂಗಮ ಸಂಸ್ಥೆ ಕಾರ್ಯ ಶ್ಲಾಘನೀಯವಾಗಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕ ನುಡಿಗಳನ್ನು ಫಾದರ್ ವಿಕ್ಟರ್ ವಾಸ್ ನಿರ್ದೇಶಕರು ಸೇವಾಸಂಗಮ ಸಂಸ್ಥೆ, ಕಲಬುರಗಿ ಇವರು ಮಾತನಾಡಿದರು. ಕಾರ್ಯಕ್ರಮದ ವೇದಿಕೆಯಲ್ಲಿ ಶ್ರೀಮತಿ ಮನಿಷಾ ರೈಸ್ಬ್ಯೋಯಾನಿಕ್ಸ ಸಂಸ್ಥೆ ಬೆಂಗಳೂರು, ಶ್ರೀ ಸಂಜೀವ ಕುಲಕರ್ಣಿ ಜಿಲ್ಲಾ ಸಂಯೋಜಕರು ಅಜೀಂ ಪ್ರೇಮಜಿ ಫೌಂಡೇಶನ್, ಶ್ರೀ ಖಾಜಾ ಹುಸೇನ ಸಾಖ್ಯ ಸಂಸ್ಥೆ ಬೆಂಗಳೂರು, ಫಾದರ್ ಪ್ರವೀಣ ಜೋಸೆಫ್ ರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಪಾಲಕರು ಪೋಷಕರು ಮತ್ತು ಮಕ್ಕಳು ಸೇರಿ ಒಟ್ಟು 100 ಜನರು ಭಾಗವಹಿಸಿದರು.

## “ಶೀಘ್ರ ಪತ್ತೆಹಚ್ಚುವಿವೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಅರಿವು ಕಾರ್ಯಕ್ರಮ”



ಜುಲೈ 12 2025ರಂದು ಸೇವಾಸಂಗಮ ಸಂಸ್ಥೆ ಮತ್ತು ಅಂಜೀಂ ಪ್ರೇಮಜೀ ಫೌಂಡೆಷನ ಇವರ ಸಂಯುಕ್ತ ಆಶ್ರಯದಲ್ಲಿ ಜಂಗೆಗಲ್ಲಿ ಅಂಗನವಾಡಿ ಕೇಂದ್ರದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಅಡಿಯಲ್ಲಿ 0 ರಿಂದ 6 ವರ್ಷದೂಳಗಿನ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳನ್ನು ಹೇಗೆ ಗುರುತಿಸಬೇಕು. ಗುರುತಿಸದ ನಂತರ ಮಕ್ಕಳಿಗೆ ವಿವಿದ ಚಟುವಟಿಕೆ ಮಾಡುವದರ ಮುಖಾಂತರ ಅವರಲ್ಲಿರುವ ನ್ಯೂನತೆಯ ತೀವ್ರತೆಯನ್ನು ಹಂತಹಂತವಾಗಿ ಕಡಿಮೆ ಮಾಡಬಹುದು ಇಂತಹ ಮಕ್ಕಳಿಗೆ ಸರಕಾರದಿಂದ ವಿವಿಧ ಸೌಲಭ್ಯಗಳನ್ನು, ದೂರೆಯುತ್ತವೆ ಎಂದು ಶ್ರೀಮತಿ. ಶಿವಕಾಂತ ಅವರು ಮಾಹಿತಿ ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತೆಯಾದ ಶ್ರೀಮತಿ ನಿರ್ಮಲ ಹಾಗೂ 8 ಜನ ಮಹಿಳೆಯರು ಭಾಗವಹಿಸಿದರು.

## “ಅರವಿನ ಕಾರ್ಯಕ್ರಮ”



21 ಜೂಲೈ 2025ರಂದು ಸೇವಾಸಂಗಮ ಸಂಸ್ಥೆ ಮತ್ತು ಅಜೀಮ್ ಪ್ರೇಮಜೀ ಫೌಂಡೆಶನ್ ಸಂಯೋಗದಲ್ಲಿ ಕಲಬುರಗಿ ತಾಲ್ಲೂಕಿನ ಹತಗುಂದಾ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. 0–6 ವರ್ಷದೊಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳನ್ನು ಹೇಗೆ ಗುರುತಿಸುವುದು. ಗುರುತಿಸಿದ ಮಕ್ಕಳನ್ನು ಹೇಗೆ ಯಾವರೀತಿ ಚಟುವಟಿಕೆಗಳನ್ನು ನೀಡುತ್ತೇವೆ ಎನ್ನುವುದರ ಕುರಿತು ಮಾಹಿತಿ ನೀಡಲಾಯಿತು. ಮಕ್ಕಳಿಗಾಗಿ ಇರುವ ಕೇಂದ್ರ ಆಧಾರಿತ ಚಟುಚಟಿಕೆಯನ್ನು ಹೇಗೆ ನೀಡುತ್ತೇವೆ ಇದರ ಉಪಯೋಗವೇನು ಎನ್ನುವುದರ ಕುರಿತು ಮತ್ತು ಕೇಂದ್ರ ಆಧಾರಿತ ಚಟುಚಟಿಕೆ ಎಷ್ಟು ಪ್ರಾಮುಖತೆ ಇದೆಯಂದು ಸಾವಳಗಿ ಪಂಚಾಯತ್ ವ್ಯಾಪ್ತಿಗೆ ಬರುವ ಚೇತನಕೇಂದ್ರದ ಸದುಪಯೋಗ ಪಡೆದುಕೊಳ್ಳಿ ಎಂದು ತಿಳಿಸಿದರು. ಬದಲಾವಣೆ ಹೊಂದಿದ ಮಕ್ಕಳನ್ನು ಉದಾಹರಣೆ ಮೂಲಕ ಕುಮಾರಿ ಲಕ್ಷ್ಮೀಅವರು 19 ಜನ ವಿದ್ಯಾರ್ಥಿಗಳಿಗೆ ತಿಳಿಸಲಾಯಿತು.



ಜುಲೈ 12 2025ರಂದು ಸೇವಾಸಂಗಮ ಸಂಸ್ಥೆ ಮತ್ತು ಅಜೀಮ್ ಪ್ರೇಮ್‌ಜಿ ಅವರ ಸಂಯೋಗದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಅಡಿಯಲ್ಲಿ ಬೆಳವಣಿಗೆಯಲ್ಲಿ ಕುಂಟಿತ ವಿರುವ ಮಕ್ಕಳ ಕುರಿತು ಕಲಬುರಗಿ ನಗರದ ವಿಜಯನಗರದ ಕಾಲೋನಿಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅರವಿನ ಕಾರ್ಯಕ್ರಮ ಹಮ್ಮಿಕೋಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಬೆಳವಣಿಗೆಯಲ್ಲಿ ಕುಂಟಿತ ವಿರುವ ಮಕ್ಕಳನ್ನು ಹೇಗೆ ಗುರಿತಿಸಬೇಕು, ಗುರುತಿಸಿದ ಮಕ್ಕಳನ್ನು ನಮ್ಮ ಸಂಸ್ಥೆ ವತಿಯಿಂದ ಯಾವರೀತಿ ಚಟುವಟಿಕೆಗಳು ನೀಡುತ್ತೇವ, ' ಮಗುವಿನಲ್ಲಿ ಯಾವರೀತಿ ಬದಲಾವಣಿ ಆಗುತ್ತದೆ ಮತ್ತು ಸರಕಾರದ ಸೌಲಭ್ಯಗಳ ಕುರಿತು ಸಂಪೂರ್ಣ ಮಾಹಿತಿಯನ್ನು ಶ್ರೀಮತಿ ವಿಜಯಲಕ್ಷ್ಮೀ ಅವರು ನೀಡಿದರು ಒಟ್ಟು 26 ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರು ಭಾಗವಹಿಸಿ ಮಾಹಿತಿ ಪಡೆದುಕೊಂಡರು.

## “ಬೆಳವಣಿಗೆಯಲ್ಲಿ ಕುಂಠಿತ ಮಕ್ಕಳ ಪಾಲಕರ ತರಬೇತಿ”



ಜುಲೈ 05 2025ರಂದು ಕಲಬುರಗಿ ನಗರಪ್ರದೇಶದ ಮದರ ತೆರೆಸಾ ಸಭಾಂಗಣದಲ್ಲಿ ಸೇವಾಸಂಗಮ ಸಂಸ್ಥೆ, ಕಲಬುರಗಿ ಅಜೀಂ ಪ್ರೇಮಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಅಡಿಯಲ್ಲಿ ಸಾಖ್ಯ ಫೌಂಡೇಶನ ವತಿಯಿಂದ ಪಾಲಕರ ತರಬೇತಿ ಹಮ್ಮಿಕೋಳ್ಳಲಾಯಿತು. ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಅಡಿಯಲ್ಲಿ 0–6 ವರ್ಷದ ಒಳಗಿನ ಮಕ್ಕಳಲ್ಲಿರುವ ನ್ಯೂನ್ಯತೆಯನ್ನು ನಾವು ಅತಿ ಶೀಘ್ರದಲ್ಲಿ ಗುರುತಿಸಿ ಅವುಗಳನ್ನು ಹೀಗೆ ಚಟುವಟಿಕೆಗಳ ಮೂಲಕ ಮನೆಯಲ್ಲಿರುವ ವಸ್ತುಗಳನ್ನು ಉಪಯೋಗಿಸಿಕೊಂಡು ಹೇಗೆ ಮಗುವಿನ ನ್ಯೂನ್ಯತೆಯನ್ನು ಕಡಿಮೆ ಮಾಡಬೇಕೆಂದು ಪೋಷಕರಿಗೆ ಪ್ರಾಯೋಗಿಕವಾಗಿ ತರಬೇತಿ ನೀಡಿದರು. ಪಾಲಕರು ಮಗುವಿನ ಜೊತೆ ಜಾಸ್ತಿ ಸಮಯ ಇರುವುದರಿಂದ ಮಗುವಿಗೆ ಹೆಚ್ಚಿನ ರೀತಿಯಲ್ಲಿ ಚಟುವಟಿಕೆ ಮಡುವುದರಿಂದ ಮಗುವಿನನಲ್ಲಿರುವ ನ್ಯೂನ್ಯತೆಯನ್ನು ಹಂತ ಹಂತವಾಗಿ ಕಡಿಮೆ ಮಾಡಬಹುದು ಎಂದು ತಿಳಿಸಿದರು.

## “ವಿಶ್ವ ಜನಸಂಖ್ಯಾ ದಿನಾಚರಣೆ ಕಾರ್ಯಕ್ರಮ”



ಜುಲೈ 11 2025ರಂದು ಕಲಬುರಗಿ ತಾಲೂಕಿನಲ್ಲಿ ಬರುವ ಫರತಬಾದ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸೇವಾಸಂಗಮ ಸಂಸ್ಥೆ ಕಲಬುರಗಿ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ, ಫರತಬಾದ ಇವರ ಸಂಯುಕ್ತ ಆಶ್ರದಲ್ಲಿ ವಿಶ್ವ ಜನಸಂಖ್ಯೆ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮವನ್ನೂ ಉದ್ದೇಶಿಸಿ ಮಾತನಾಡಿದ ಆಡಳಿತ ವೈದ್ಯಾಧಿಕಾರಿಗಳಾದ ಶ್ರೀ ಸಂತೋಷ್ವಾ ಪಾಟೀಲ್ ರವರು ವಿಶ್ವ ಜನಸಂಖ್ಯೆ ದಿನಾಚರಣೆಯ ಕಾರ್ಯಕ್ರಮದ ಹಿನ್ನಲೆ ಕುರಿತು ಮಾತನಾಡಿದರು. ಶ್ರೀಮತಿ ಗಂಗೂಬಾಯಿ BHEO ಅವರು ಮಾತನಾಡಿ ಮಕ್ಕಳ ಹೆರಿಗೆಯಲ್ಲಿ ತಾಯಂದಿರು ಅಂತರವನ್ನು ಕಾಯ್ದುಕೊಳ್ಳಬೇಕು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಸೇವಾಸಂಗಮ ಸಂಸ್ಥೆ ಕಾರ್ಯಕರ್ತರು ಹಾಗೂ ಸಮಾಜ ಸೇವಕರಾದ ರಾಜಕುಮಾರ ಮಾತನಾಡಿ ಪ್ರಸ್ತುತ ಬೆಳೆಯುತ್ತಿರುವ ಜನಸಂಖ್ಯೆಯನ್ನು ನಿಯಂತ್ರಣ ಮಾಡದಿದ್ದರೆ ಮುಂದೊಂದು ದಿನ ಜನಸಂಖ್ಯೆ ಸ್ಫೋಟಗೊಳ್ಳುತ್ತದೆ. ಪ್ರತಿ ವರ್ಷ ಜುಲೈ 11 ರಂದು ಜನಸಂಖ್ಯೆಯನ್ನು ನಿಯಂತ್ರಣ ಮಾಡುವ ಬಗ್ಗೆ ಜನರಲ್ಲಿ ಜಾಗೃತಿಯನ್ನು ಮೂಡಿಸುವ ಸಂಬಂಧ ವಿಶ್ವ ಜನಸಂಖ್ಯೆ ದಿನಾಚರಣೆಯನ್ನು ಆಚರಿಸಲಾಗುತ್ತದೆ ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ 25 ಜನರು ಭಾಗವಹಿಸಿದರು.

## “ಆರೋಗ್ಯವೇ ಭಾಗ್ಯ”



26 ಜುಲೈ 2025ರಂದು ಕಲಬುರಗಿ ತಾಲೂಕಿನ ಧರ್ಮಪುರ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೇವಾಸಂಗಮ ಸಂಸ್ಥೆ, ಇಂಡಿಯನ್ ಕ್ಯಾನ್ಸರ್ ಸೊಸೈಟಿ ಹಾಗೂ ಡಾನ್ ಬಾಸ್ಕೊ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಉಚಿತವಾಗಿ ಕ್ಯಾನ್ಸರ್ ತಪಾಸಣೆಯನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮವನ್ನು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಗುರುಗಳಾದ ಶ್ರೀಮತಿ ಶಿವಲೀಲಾ ರವರು ಕಾರ್ಯಕ್ರಮವನ್ನು ಉದ್ಘಾಟಿಸಿ, ಸೇವಾಸಂಗಮ ಸಂಸ್ಥೆಯು ಅನೇಕ ಕ್ಷೇತ್ರಗಳಲ್ಲಿ ಬಡವರಿಗಾಗಿ, ರೈತರಿಗಾಗಿ, ಮಕ್ಕಳಿಗಾಗಿ, ಯುವಕರಿಗಾಗಿ, ವಯಸ್ಕರಿಗಾಗಿ, ಮಹಿಳೆಯರಿಗಾಗಿ ಕಾರ್ಯನಿರ್ವಹಿಸುತಿದ್ದು ಇಂದು ಹಮ್ಮಿಕೊಂಡಿರುವ ಕ್ಯಾನ್ಸರ್ ತಪಾಸಣೆಯಿಂದ ಗ್ರಾಮಸ್ಥರೆಲ್ಲರೂ ಚಿಕಿತ್ಸೆಯನ್ನು ಪಡೆದುಕೊಳ್ಳಿ ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ಸಂಯೋಜಕರಾದ ಶ್ರೀಯುತ ಶ್ರೀ ನಿಧಿ ಸರ್ ಮತ್ತು ಸಿಬ್ಬಂದಿ ವರ್ಗದವರು ಹಾಗೂ ಡಾನ್ ಬಾಸ್ಕೊ ಸಂಸ್ಥೆಯ ಶ್ರೀಮತಿ ಸುಕನ್ಯ ಹಾಗೂ ಸಿಬ್ಬಂದಿ ವರ್ಗದವರು ಮತ್ತು ಸೇವಾಸಂಗಮ ಸಂಸ್ಥೆಯ ಕಾರ್ಯಕ್ರಮಗಳ ವ್ಯವಸ್ಥಾಪಕಿಯಾದ ಸಿಸ್ಟರ್ ವೀರಾ, ಹಾಗೂ ಕಾರ್ಯಕ್ರಮವನ್ನು ಸ್ಪರ್ಶ ಕಾರ್ಯಕ್ರಮದ ಸಂಯೋಜಕಿಯಾದ ಶ್ರೀಮತಿ ನಂದಿನಿರವರು ನಿರೂಪಿಸಿದರು. ಕುಮಾರಿ ರಂಜಿತಾರವರು ಸ್ವಾಗತಿಸಿದರು. ಶ್ರೀಯುತ ಚಂದ್ರಕಾಂತರವರು ಪ್ರಾಸ್ತಾವಿಕ ನುಡಿಯನ್ನು ನುಡಿದರು ಹಾಗೂ ಶ್ರೀಮತಿ ಇಂದುರವರು ವಂದಿಸಿದರು. ಧರ್ಮಪುರ ಗ್ರಾಮದ ಮುಂಖಡರಾದ ಶ್ರೀಯುತ ಜಗದೀಶ್ ಪೋಲಿಸ್ ಪಾಟೀಲ್, ಗ್ರಾಮ ಪಂಚಾಯಿತಿಯ ಸದಸ್ಯರಾದ ಶಾಂತು ಕಟ್ಟಿಮನಿ, ಸ್ವಯಂ ಸೇವಕರಾದ ಶ್ರೀಮತಿ ಶಹಜ ಬೇಗಂ, ಮಲ್ಲು ದೊಡ್ಡಮನಿ, ಯುವರಾಜ ದೊಡ್ಡಮನಿ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು. ಒಟ್ಟು 87 ಜನರು ಉಚಿತವಾಗಿ ಕ್ಯಾನ್ಸರ್ ತಪಾಸಣೆಯನ್ನು ಮಾಡಿಕೊಂಡರು.





# “ವನಮೋಹತ್ಸವ ಕಾರ್ಯಕ್ರಮ”



ಜುಲೈ 9 2025ರಂದು ಕಲಬುರಗಿ ತಾಲೂಕಿನಲ್ಲಿ ಬರುವ ಫರತಾಬಾದ ಗ್ರಾಮದಲ್ಲಿ ಸೇವಾಸಂಗಮ ಸಂಸ್ಥೆ ವತಿಯಿಂದ ವನಮೋಹತ್ಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಮಹಿಳಾ ಸಬಲೀಕರಣ ಕಾರ್ಯಕ್ರಮದ ಸಂಯೋಜಕಿಯಾದ ಶ್ರೀಮತಿ ಇಂದುರವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದಂತಹ ಪತ್ರಿಯೊಬ್ಬರಿಗೆ ತಮ್ಮ ಮನೆಯ ಸುತ್ತಾ ಮುತ್ತಾ ಸಸಿಗಳನ್ನು ನೆಡಬೇಕೆಂದು ತಿಳಿಸುತ್ತಾ, ಹೆಚ್ಚಾಗಿ ನಾವು ಮರ ಗಿಡಗಳನ್ನು ಬೆಳೆಸಿದರೆ ಬೇಸಿಗೆ ಕಾಲದಲ್ಲಿ ಬಿಸಿಲಿನ ತಾಪಮಾನ ಕಡಿಮೆ ಆಗುತ್ತದೆ ಎಂದು ಹೇಳಿದರು. ಕನಕ ಮಹಿಳಾ ಸಂಘದ ಸದಸ್ಯರನ್ನು ಕಲಬುರಗಿಯ ಅರಣ್ಯ ಇಲಾಖೆಗೆ ಕರೆದುಕೊಂಡು ಹೋಗಿ 26 ಜನ ಮಹಿಳೆಯರಿಗೆ ಉಚಿತವಾಗಿ 50 ಸಸಿಗಳನ್ನು ಕೊಡಿಸಿದರು.



# “ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾದ ಆರ್ಬಿಟ್ ಸಂಸ್ಥೆ ಮತ್ತು ಸೇವಾ ಸಂಘಮ ಸಂಸ್ಥೆ ಕಾರ್ಯಕ್ರಮಗಳು”

## ವನ ಮಹೋತ್ಸವ ಕಾರ್ಯಕ್ರಮ



ಬೀದರ ಎಕ್ಸ್‌ಪ್ರೆಸ್ ಸುದ್ದಿ ; ಔರಾದ್ ; ಸಸಿಗಳನ್ನು ಬೆಳೆಸಿ, ನಾಡು ಉಳಿಸುವುದು ಎಲ್ಲರ ಆಧ್ಯ ಕರ್ತವ್ಯವಾಗಬೇಕು ಎಂದು ಸಂತಪುರ ದೀಪಾಲಯ ಮತ್ತು ಆರ್ಬಿಟ್ ಸಾಮಾಜಿಕ ಸೇವಾ ಕೇಂದ್ರದ ಸಂಪನ್ಮೂಲ ವ್ಯಕ್ತಿ ಸಿಸ್ಟರ್ ಲಿನೇಟ್ ನುಡಿದರು. ತಾಲೂಕಿನ ಸಂತಪುರ ಹೋಲಿ ಕ್ರಾಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿಯಲ್ಲಿ ಸಂತಪುರ ದೀಪಾಲಯ ಮತ್ತು ಆರ್ಬಿಟ್ ಸಾಮಾಜಿಕ ಸೇವಾ ಕೇಂದ್ರದ ಸಹಯೋಗದಲ್ಲಿ ಬುಧವಾರ ಏರ್ಪಡಿಸಿದ ವನಮಹೋತ್ಸವ ಕಾರ್ಯಕ್ರಮದಲ್ಲಿ ಸಸಿಗಳನ್ನು ನೆಟ್ಟು ಮಕ್ಕಳಿಗೆ ಪರಿಸರದ ಬಗ್ಗೆ ಜಾಗೃತಿ ನೀಡಿ ಮಾತನಾಡಿದ ಅವರು, ಪರಿಸರ ಸಂರಕ್ಷಣೆ ಮತ್ತು ಸಸಿಗಳನ್ನು ನೆಡುವುದರಿಂದ ಒಳ್ಳೆ ಗಾಳಿ, ಮಳೆ, ಸೇರಿದಂತೆ ಉತ್ತಮ ವಾತವರಣ ಸಿಗುತ್ತದೆ. ಪ್ರಕೃತಿ ಉತ್ತಮವಾಗಿದ್ದರೇ ಮಾತ್ರ ನಾವೆಲ್ಲ ಚಂದವಾದ ಬದುಕು ನಡೆಸುವುದು ಸಾಧ್ಯವಾಗಿದೆ ಎಂದರು. ಮುಖ್ಯಗುರು ಜೋಸೆಫಿನ್, ಮಿನಾಕ್ಷಿ, ಸುಧೀರ್, ಅಭಿಷೇಕ್, ವೇರೋನೀಕಾ, ಸಂಜನಾ, ಸ್ವಾತಿ, ಪ್ರಜ್ವಲ್ ಇದ್ದರು.

## ಮಲ್ಲಮ್ಮ ನುಡಿ

Mallammanudi Regional NewsPaper · ಪ್ರಾದೇಶಿಕ ಕನ್ನಡ ದಿನಪತ್ರಿಕೆ · ಮೊ.9448604450

27 Jul 2025 - Page 3

### ಆರ್ಬಿಟ್ ಸಂಸ್ಥೆ ಯಲ್ಲಿ ಯಶಸ್ವಿಯಾಗಿ ಜರುಗಿದ ಆಡು ಸಾಕಾಣಿಕೆ ತರಬೇತಿ ಕಾರ್ಯಗಾರ



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ:-ಪಟ್ಟಣದ ಆರ್ಬಿಟ್ ಸಂಸ್ಥೆ ಮತ್ತು ಅಜೀಮ್ ಪ್ರೇಮಜಿಫೌಂಡೇಶನ್ ವತಿಯಿಂದ ನಡೆಯುವ ನವ ಜೀವನ ಕಾರ್ಯಕ್ರಮದಡಿಯಲ್ಲಿ ಫಲಾನುಭವಿಗಳ ಪೋಷಕರಿಗೆ, ಪಶು ಸಂಗೋಪನೆ ಇಲಾಖೆಯ ಸಹಯೋಗದಲ್ಲಿ ವೈಜ್ಞಾನಿಕ ಆಡು ಸಾಕಾಣಿಕೆ ತರಬೇತಿ ನೀಡಲಾಯಿತು.

ಈ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಸ್ಥೆಯ ನಿರ್ದೇಶಕರಾದ ಫಾದರ ವಿಕ್ಟರವಾಸ್ ನೆರವೇರಿಸಿ, ಪ್ರತಿ ಯೊಬ್ಬ ಫಲಾನುಭವಿಗಳು ತರಬೇತಿ ಯ ಲಾಭ ಪಡೆದು-ಕೊಂಡು ಸ್ವಯಂ ಉದ್ಯೋಗ ದಲ್ಲಿ ನಿರತರಾಗಲು ಸಲಹೆ ನೀಡಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ಶಾಂತಕುಮಾರ ಸಿದ್ದೇಶ್ವರ, ಮುಖ್ಯ

## ಈಶಾನ್ಯ ಟೈಮ್ಸ್

### ಆರ್ಬಿಟ್ ಸಂಸ್ಥೆ ಯಲ್ಲಿ ಯಶಸ್ವಿಯಾಗಿ ಜರುಗಿದ ಆಡು ಸಾಕಾಣಿಕೆ ತರಬೇತಿ ಕಾರ್ಯಗಾರ



**ಹುಮನಾಬಾದ:**

ಪಟ್ಟಣದ ಆರ್ಬಿಟ್ ಸಂಸ್ಥೆ ಮತ್ತು ಅಜೀಮ್ ಪ್ರೇಮಜಿಫೌಂಡೇಶನ್ ವತಿಯಿಂದ ನಡೆಯುವ ನವ ಜೀವನ ಕಾರ್ಯಕ್ರಮದಡಿಯಲ್ಲಿ ಫಲಾನುಭವಿಗಳ ಪೋಷಕರಿಗೆ, ಪಶು ಸಂಗೋಪನೆ ಇಲಾಖೆಯ ಸಹಯೋಗದಲ್ಲಿ ವೈಜ್ಞಾನಿಕ ಆಡು ಸಾಕಾಣಿಕೆ ತರಬೇತಿ ನೀಡಲಾಯಿತು.

ಈ ಕಾರ್ಯಕ್ರಮ ದ ಉದ್ಘಾಟನೆ ಯನ್ನು ಸಂಸ್ಥೆ ಯ ನಿರ್ದೇಶಕರಾದ ಫಾದರ ವಿಕ್ಟರವಾಸ್ ನೆರವೇರಿಸಿ, ಪ್ರತಿ ಯೊಬ್ಬ ಫಲಾನುಭವಿಗಳು ತರಬೇತಿ ಯ ಲಾಭ ಪಡೆದುಕೊಂಡು ಸ್ವಯಂ ಉದ್ಯೋಗ ದಲ್ಲಿ ನಿರತರಾಗಲು ಸಲಹೆ ನೀಡಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ಶಾಂತಕುಮಾರ ಸಿದ್ದೇಶ್ವರ, ಮುಖ್ಯ ಪಶು ವೈದ್ಯಾ ಧಿಕಾರಿಗಳು ಭಾಗವಹಿಸಿ, ವೈಜ್ಞಾನಿಕ ಆಡು ಸಾಕಾಣಿಕೆ ಕುರಿತು ಮಾತನಾಡಿ ಆಡುಗಳ ತಳಿಗಳು, ವಸತಿ, ಸಂತಾನೋತ್ಪತ್ತಿ, ಆಹಾರ ನಿರ್ವಹಣೆ, ಮರಿಗಳ ಆರೈಕೆ, ಆಡುಗಳ ಆರೋಗ್ಯ ರಕ್ಷಣೆ, ರೋಗಗಳು, ಲಸಿಕೆ ವಿಧಾನಗಳ ಮತ್ತು ಸರಕಾರ ದ ವತಿಯಿಂದ ದೊರಕುವ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು.

ಈ ತರಬೇತಿಯಲ್ಲಿ ಆರ್ಬಿಟ್ ಸಂಸ್ಥೆಯ ಸಿಬ್ಬಂದಿಗಳಾದ ಪ್ರವೀಣಕುಮಾರ ಮೇತ್ರೆ, ಅರುಣಕುಮಾರ್ ಕೋಟೆ, ಹಣಮಂತ ಇಟಿಗಾ, ಅರುಣ, ಕಂಠಿ, ಡೇವಿಡ್, ರವಿ, ಮಹಾದೇವಿ, ಪೂಜಾ ಸೇರಿದಂತೆ ಇತರರು ಭಾಗವಹಿಸಿದ್ದರು.

## ಸಂಜೆವಾಣಿ

Sanjevani Daily /Kalaburgi | July 24 Thursday 2025 | Vol: 31

### ಸಸಿಗಳನ್ನು ಬೆಳೆಸಿ ಉಳಿಸುವುದು ಎಲ್ಲರ ಆದ್ಯ ಕರ್ತವ್ಯ



ಔರಾದ್ :ಜು.24: ಸಸಿಗಳನ್ನು ಬೆಳೆಸಿ, ನಾಡು ಉಳಿಸುವುದು ಎಲ್ಲರ ಆಧ್ಯ ಕರ್ತವ್ಯವಾಗಬೇಕು ಎಂದು ಸಂತಪುರ ದೀಪಾಲಯ ಮತ್ತು ಆರ್ಬಿಟ್ ಸಾಮಾಜಿಕ ಸೇವಾ ಕೇಂದ್ರದ ಸಂಪನ್ಮೂಲ ವ್ಯಕ್ತಿ ಸಿಸ್ಟರ್ ಲಿನೇಟ್ ನುಡಿದರು.

ತಾಲೂಕಿನ ಸಂತಪುರ ಹೋಲಿ ಕ್ರಾಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಸಂತಪುರ ದೀಪಾಲಯ ಮತ್ತು ಆರ್ಬಿಟ್ ಸಾಮಾಜಿಕ ಸೇವಾ ಕೇಂದ್ರದ ಸಹಯೋಗದಲ್ಲಿ ಬುಧವಾರ ಏರ್ಪಡಿಸಿದ ವನಮಹೋತ್ಸವ ಕಾರ್ಯಕ್ರಮದಲ್ಲಿ ಸಸಿಗಳನ್ನು ನೆಟ್ಟು ಮಕ್ಕಳಿಗೆ ಪರಿಸರದ ಬಗ್ಗೆ ಜಾಗೃತಿ ನೀಡಿ ಮಾತನಾಡಿದ ಅವರು, ಪರಿಸರ ಸಂರಕ್ಷಣೆ ಮತ್ತು ಸಸಿಗಳನ್ನು ನೆಡುವುದರಿಂದ ಒಳ್ಳೆ ಗಾಳಿ, ಮಳೆ, ಸೇರಿದಂತೆ ಉತ್ತಮ ವಾತವರಣ ಸಿಗುತ್ತದೆ. ಪ್ರಕೃತಿ ಉತ್ತಮವಾಗಿದ್ದರೇ ಮಾತ್ರ ನಾವೆಲ್ಲ ಚಂದವಾದ ಬದುಕು ನಡೆಸುವುದು ಸಾಧ್ಯವಾಗಿದೆ ಎಂದರು.

ಈ ಸಂಧರ್ಭದಲ್ಲಿ ಮುಖ್ಯಗುರು ಜೋಸೆಫಿನ್, ಮಿನಾಕ್ಷಿ, ಸುಧೀರ್, ಅಭಿಷೇಕ್, ವೇರೋನೀಕಾ, ಸಂಜನಾ, ಸ್ವಾತಿ, ಪ್ರಜ್ವಲ್ ಇದ್ದರು

## ಗುಮ್ಮಟ ನಗರಿ

25725-page-006 · 25 Jul 2025

### ಗಿಡ ಬೆಳಸಿ ನಾಡು ಬೆಳೆಸಿ: ಲಿನೇಟ್



ಗುಮ್ಮಟ ನಗರಿ ನ್ಯೂಸ್ >> ಔರಾದ್: ಸಸಿಗಳನ್ನು ಬೆಳೆಸಿ, ನಾಡು ಉಳಿಸುವುದು ಎಲ್ಲರ ಆದ್ಯ ಕರ್ತವ್ಯವಾಗಬೇಕು ಎಂದು ಸಂತಪುರ ದೀಪಾಲಯ ಮತ್ತು ಆರ್ಬಿಟ್ ಸಾಮಾಜಿಕ ಸೇವಾ ಕೇಂದ್ರದ ಸಂಪನ್ಮೂಲ ವ್ಯಕ್ತಿ ಸಿಸ್ಟರ್ ಲಿನೇಟ್ ನುಡಿದರು.

ತಾಲೂಕಿನ ಸಂತಪುರ ಹೋಲಿ ಕ್ರಾಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಸಂತಪುರ ದೀಪಾಲಯ ಮತ್ತು ಆರ್ಬಿಟ್ ಸಾಮಾಜಿಕ ಸೇವಾ ಕೇಂದ್ರದ ಸಹಯೋಗದಲ್ಲಿ ಬುಧವಾರ ಏರ್ಪಡಿಸಿದ ವನಮಹೋತ್ಸವ ಕಾರ್ಯಕ್ರಮದಲ್ಲಿ ಸಸಿಗಳನ್ನು ನೆಟ್ಟು ಮಕ್ಕಳಿಗೆ ಪರಿಸರದ ಬಗ್ಗೆ ಜಾಗೃತಿ ನೀಡಿ ಮಾತನಾಡಿದರು. ಪರಿಸರ ಸಂರಕ್ಷಣೆ ಮತ್ತು ಸಸಿಗಳನ್ನು ನೆಡುವುದರಿಂದ ಒಳ್ಳೆ ಗಾಳಿ, ಮಳೆ, ಸೇರಿದಂತೆ ಉತ್ತಮ ವಾತವರಣ ಸಿಗುತ್ತದೆ. ಪ್ರಕೃತಿ ಉತ್ತಮವಾಗಿದ್ದರೇ ಮಾತ್ರ ನಾವೆಲ್ಲ ಚಂದವಾದ ಬದುಕು ನಡೆಸುವುದು ಸಾಧ್ಯವಾಗಿದೆ ಎಂದರು.

ಈ ಸಂದರ್ಭದಲ್ಲಿ ಶಾಲೆಯ ಮುಖ್ಯಗುರು ಜೋಸೆಫಿನ್, ಮಿನಾಕ್ಷಿ, ಸುಧೀರ್, ಅಭಿಷೇಕ್, ವೇರೋನೀಕಾ, ಸಂಜನಾ, ಸ್ವಾತಿ, ಪ್ರಜ್ವಲ್ ಇದ್ದರು.

# ORBIT NGO

Non-Governmental Organization
Humnabad, Karnataka

Organization of Bidar Integral Transformation

## Scan this QR Code

# TO DONATE

www.orbitbidar.in

# SEVA SANGAMA

Organization for Social Concern Development

## Scan this QR Code

## TO DONATE

www.sevasangama.in

# ಸೇವಾ ಸಂಗಮ ಮತ್ತು ಆರ್ಬಿಟ್ ಸಂಸ್ಥೆ (NGO)
# ಗುಲ್ಬರ್ಗಾ ಧರ್ಮಕ್ಷೇತ್ರ

## Appeal

ಗುಲ್ಬರ್ಗಾ ಧರ್ಮ ಕ್ಷೇತ್ರವು ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಬೀದರ್, ಬಿಜಾಪುರ್, ಯಾದಗಿರಿ ಹಾಗೂ ಗುಲ್ಬರ್ಗಾ ಜಿಲ್ಲೆಗಳನ್ನು ಒಳಗೊಂಡಿದೆ. ಗುಲ್ಬರ್ಗಾ ಧರ್ಮಕ್ಷೇತ್ರವು ಉಗಮ ಆಗುವುದಕ್ಕಿಂತ ಮುಂಚೆ ಮಂಗಳೂರು ಧರ್ಮಕ್ಷೇತ್ರದಿಂದ ಗುರುಗಳು ಹಾಗೂ ಕನ್ಯಾ ಭಗಿನಿಯರು ಬೀದರ್ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಮುಖಾಂತರ 1993 ರಿಂದ ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ, ಅಂಗವಿಕಲರ ಸಬಲೀಕರಣ ಹಾಗೂ ನಿರ್ಗತಿಕರಿಗೆ ಆಸರೆ ಒದಗಿಸುವ ಕೆಲಸವನ್ನು ಮಾಡಿದ್ದಾರೆ. ಹಾಗೆ 2005ನೇ ಇಸವಿಯಲ್ಲಿ ಗುಲ್ಬರ್ಗಾ ಧರ್ಮಕ್ಷೇತ್ರ ಉಗಮವಾದಾಗಿನಿಂದ ಈ ಸಮಾಜ ಸೇವಾ ಕೆಲಸವನ್ನು ನಾಲ್ಕು ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ಸೇವಾ ಸಂಗಮ ಹಾಗೂ ಆರ್ಬಿಟ್ ಸಂಸ್ಥೆಗಳ ಮುಖಾಂತರ ಮಹಿಳಾ ಸಬಲೀಕರಣ, ಮಕ್ಕಳ ಶಿಕ್ಷಣ, ಅಂಗವಿಕಲರ ಕಾರ್ಯಕ್ರಮ, ಪರಿಸರ ಸಂರಕ್ಷಣೆ, ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ, ಮಾನಸಿಕ ಅಸ್ವಸ್ಥರಿಗೆ ಪುನರ್ವಸತಿ, ಎಂಟು ವರ್ಷಕ್ಕಿಂತ ಕೆಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಚಿಕಿತ್ಸೆ, ನೈಸರ್ಗಿಕ ವಿಪತ್ತು ನಿವಾರಣೆ, ಕ್ಯಾನ್ಸರ್ ಜಾಗೃತಿ ಆಂದೋಲನ, ಹೀಗೆ ಸಮಾಜದಿಂದ ಹಂಚಿಕೆ ತಳ್ಳಲ್ಪಟ್ಟ ಜನರಿಗೆ ಪುರ್ನವಸತಿ ನೀಡುವ ಕೆಲಸವನ್ನು ಈ ಎರಡು ಸಂಸ್ಥೆಗಳು ಮಾಡುತ್ತಿವೆ. ಹಲವಾರು ಕಾರ್ಯಕ್ರಮಗಳ ಮುಖಾಂತರ ನಮ್ಮ ಎರಡು ಸಂಸ್ಥೆಗಳು ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ, ಹಾಗೂ ವಿವಿಧ ಶೋಷಣೆಗಳಿಗೆ ಒಳಗಾದ ಜನರಿಗೆ ಸ್ಪೂರ್ತಿ, ಶಕ್ತಿ, ಹಾಗೂ ಜೀವವನ್ನು ತುಂಬುತ್ತವೆ. ಈ ಸೇವೆಗಳನ್ನು ಹೆಚ್ಚು ಜನರಿಗೆ ತಲುಪಿಸಲು, ನಿಮ್ಮ ಸಹಾಯ ಹಸ್ತವನ್ನು ಹಾಗೂ ನಮ್ಮೊಂದಿಗೆ ಸೇರಿ ಸುಂದರ ಸಮಾಜವನ್ನು ಕಟ್ಟಲು ನಿಮ್ಮ ನೆರವನ್ನು ಅಪೇಕ್ಷಿಸುತ್ತೇವೆ.

ಬನ್ನಿ ಉತ್ತಮ ಸಮಾಜವನ್ನು ಕಟ್ಟೋಣ.



**TO DONATE, SCAN THE QR CODE**

ನಿಮ್ಮ ಸಹಾಯದಿಂದ ಗುಲ್ಬರ್ಗಾ ಹಾಗೂ ಬೀದರ, ಕೋಳಗೇರಿ ನಿವಾಸ ಮಕ್ಕಳು ಉತ್ತಮ ಶಿಕ್ಷಣ ಪಡೆಯುತ್ತಾರೆ.

ನಿಮ್ಮ ಸಹಾಯದಿಂದ ವಿಶೇಷ ಚೇತನ ಮಕ್ಕಳು ತಮ್ಮ ಸಾಮರ್ಥ್ಯ ಹಾಗೂ ಕೌಶಲ್ಯಗಳು ಕಂಡುಕೊಳ್ಳುತ್ತಾರೆ.

ಪ್ರಾಯೋಜಕರು ಒಂದು ಟ್ಯೂಷನ್ ಸೇಂಟರ್ ಪ್ರತಿ ತಿಂಗಳು 4000/– ವರ್ಷಕ್ಕೆ 40,000/–

ಪ್ರಾಯೋಜಕರು ಒಂದು ಮಗು ರೂ.500 ಪ್ರತಿ ತಿಂಗಳು / ವರ್ಷಕ್ಕೆ 6000/–

ನೀವು ಧನ ಸಹಾಯ ಮಾಡಿದ ಮೇಲೆ ನಿಮ್ಮ ವಿಳಾಸ ಮತ್ತು PAN number ಕೆಳಗಿರುವ ಸಂಖ್ಯೆಗೆ WhatsApp ಮಾಡುವುದು.

**(Only for Indian Citizens)**

**Bank Account Details**

| | |
|---|---|
| Name | : Sevasangama Development Society |
| Account No | : 16040100022902 |
| IFSC Code | : FDRL0001604 |
| Bank | : Federal Bank |
| Branch | : Super Market Kalaburagi |

Fr. Victor Anil Vas
Director, Seva Sangama & ORBIT

Address

Seva Sangama Development Society, Near Kendriya Vidyalaya, Kotnoor D, Kalaburagi, Karnataka-585102
Contact: 8660968063 / 9743112739 - Email: sevasangama2006@gmail.com / Website: www.sevasangama.in